
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಮುಲ್ಲನ್‌ಪುರನ ಮಹಾರಾಜ ಯಾದವೀಂದ್ರ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ಮಂಗಳವಾರ ನಡೆದ ಐಪಿಎಲ್ 19ನೇ ಆವೃತ್ತಿಯ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ 162 ರನ್ ಗಳಿಸಿದೆ.


01 ಏಪ್ರಿಲ್ 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 22 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ತರಾತುರಿಯಲ್ಲಿ ತೃತೀಯ ಭಾಷೆ ಕೈ ಬಿಟ್ಟದ್ದೇಕೆ ? » 2



ಸರ್ಕಾರಿ ವೈದ್ಯರ ಖಾಸಗಿ ಸೇವೆಗೆ ಆಕ್ರೋಶ » 3



ಇಂದಿನಿಂದ ಜಿಲ್ಲಾದ್ಯಂತ ಸ್ವಯಂ ಮನೆಗಣತಿ ಪ್ರಾರಂಭ » 4

# ಪ್ರವಾಸಿ ತಾಣಗಳಲ್ಲಿ ಸಾರ್ವಜನಿಕ ಪ್ರಜ್ಞೆ ಇರಲಿ

## ಬೆಟ್ಟದ ಭೈರವೇಶ್ವರ ದೇಗುಲದಲ್ಲಿ ಸಭೆಯಲ್ಲಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಪ್ರವಾಸಿ ತಾಣಗಳಲ್ಲಿ ಸಾರ್ವಜನಿಕ ಪ್ರಜ್ಞೆ ಕಡಿಮೆಯಾಗುತ್ತಿದ್ದು, ಪ್ರವಾಸಿಗರ ಬೇಜವಾಬ್ದಾರಿತನ ಹೆಚ್ಚುತ್ತಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಹಾನುಬಾಳು ಹೋಬಳಿ ಮರಗುಂದ ಗ್ರಾಮದ ಬೆಟ್ಟದ ಭೈರವೇಶ್ವರ ದೇವಾಲಯದಲ್ಲಿ ಮಾ.27ರಂದು ಛಾಯಾಗ್ರಾಹಕರು ಹಾಗು ಸ್ಥಳೀಯರ ನಡುವೆ ನಡೆದ ಗಲಾಟೆ ವಿಚಾರವಾಗಿ ಮಂಗಳವಾರ ಗ್ರಾಮಸ್ಥರು ಹಾಗು ಮುಖಂಡರೊಂದಿಗೆ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ತಾಲ್ಲೂಕು ರಾಜ್ಯದ ಪ್ರಮುಖ ಪ್ರವಾಸಿ ತಾಣವಾಗಿದೆ. ಪ್ರವಾಸೋದ್ಯಮವನ್ನು ಉತ್ತೇಜಿಸುವುದು ಸರ್ಕಾರದ ಉದ್ದೇಶ. ಆದರೆ, ಕೆಲವು ಪ್ರವಾಸಿಗರ ಅಸಭ್ಯ ವರ್ತನೆ, ಪರಿಸರ ಹಾನಿ ಹಾಗು ಪವಿತ್ರ ಸ್ಥಳಗಳ ಗೌರವ ಹಾಳು ಮಾಡುವ ಘಟನೆಗಳು ಹೆಚ್ಚುತ್ತಿರುವುದು ಚಿಂತಾಜನಕವೆಂದರು.

ಪ್ರವಾಸಿಗರು ಭೇಟಿ ನೀಡುವ ಸ್ಥಳಗಳನ್ನು ತಮ್ಮ ಸ್ವಂತ ಆಸ್ತಿಯಂತೆ ಬಳಸಿಕೊಳ್ಳುವುದು, ಪ್ಲಾಸ್ಟಿಕ್ ಬಾಟಲಿ, ಕವರ್ ಹಾಗು ಇತರೆ ತ್ಯಾಜ್ಯವನ್ನು ರಸ್ತೆಯ ಎಲ್ಲೆಂದರಲ್ಲಿ ಎಸೆಯುವುದನ್ನು ಕಾಣಬಹುದಾಗಿದೆ. ಅದರಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದ್ದು, ಸ್ಥಳೀಯರು ತೊಂದರೆ ಅನುಭವಿಸುತ್ತಿದ್ದಾರೆ. ಪ್ರವಾಸೋದ್ಯಮದ ಜೊತೆಗೆ ಸಾರ್ವಜನಿಕ ಪ್ರಜ್ಞೆ ಹಾಗು ಜವಾಬ್ದಾರಿಯೂ ಅಗತ್ಯವಿದ್ದು, ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯವೆಂದು ಸೂಚಿಸಿದರು.

ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಅವರು ಮಾತನಾಡಿ, ದೇವಸ್ಥಾನದ ಪಾವಿತ್ರ್ಯತೆಗೆ ಧಕ್ಕೆ ತರುವ ಘಟನೆಗಳು ಹೆಚ್ಚುತ್ತಿದ್ದು, ಪ್ರಶ್ನಿಸುವವರಿಗೆ ತೊಂದರೆ ಉಂಟಾಗುತ್ತಿರುವುದು ಆತಂಕಕಾರಿ. ದೇವಸ್ಥಾನದ ಜೀರ್ಣೋದ್ಧಾರ ಹಾಗು ರಸ್ತೆ ಕಾಮಗಾರಿಗಳ ವಿಚಾರದಲ್ಲಿ ಹಿಂದೆ ಒಂಬತ್ತು ಮಂದಿ ಜೈಲಿಗೆ ಹೋಗಿರುವುದನ್ನು ಉಲ್ಲೇಖಿಸಿದ ಅವರು, ಪವಿತ್ರ ಸ್ಥಳದ ಗೌರವ ಕಾಪಾಡಲು ಪ್ರಯತ್ನಿಸುವವರೇ ಸಮಸ್ಯೆ ಎದುರಿಸುವ ಸ್ಥಿತಿ ನಿರ್ಮಾಣವಾಗಿರುವುದಾಗಿ ಹೇಳಿದರು.



> ಬೆಟ್ಟದ ಭೈರವೇಶ್ವರ ದೇಗುಲದ ಸುತ್ತಲಿನ ಒಂಬತ್ತು ಗ್ರಾಮಸ್ಥರು ವಿವಿಧ ಬೇಡಿಕೆಗಳನ್ನು ಸಲ್ಲಿಸಿದ್ದು, ಅಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಪ್ರವಾಸಿಗರು ಜವಾಬ್ದಾರಿ ಅರಿತು ಇರಬೇಕು. ಅನಾಗರಿಕರಂತೆ ವರ್ತಿಸುವುದು ಸರಿಯಲ್ಲ.
> -ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ

ಇತ್ತೀಚಿನ ಘಟನೆಯಲ್ಲಿ ಗರ್ಭಗುಡಿಯ ಗೋಡೆಯ ಬಳಿ ಪ್ರೀ-ವೆಡ್ಡಿಂಗ್ ಫೋಟೋ ಶೂಟ್ ನಡೆಸಲು ಯತ್ನಿಸಿದ ವಿಚಾರವೇ ಗಲಾಟೆಗೆ ಕಾರಣವಾಯಿತು. ಅರ್ಚಕರು ಹಾಗು ಭಕ್ತರು ತಡೆಯಲು ಮುಂದಾದಾಗ ಕೆಲವರು ಅಸಭ್ಯವಾಗಿ ವರ್ತಿಸಿ ಪ್ರಚೋದನೆ ನೀಡಿದ ಹಿನ್ನಲೆಯಲ್ಲಿ ಪರಿಸ್ಥಿತಿ ಉದ್ವಿಗ್ನಗೊಂಡಿತು ಎಂದು ವಿವರಿಸಿದರು.

ಕೆಲವರು ತಮ್ಮನ್ನು ಪ್ರಭಾವಿ ವ್ಯಕ್ತಿಗಳ ಮಕ್ಕಳೆಂದು ಹೇಳಿಕೊಂಡು ಸ್ಥಳೀಯರನ್ನು ಬೆದರಿಸುವ ಪರಿಪಾಠ ಮುಂದುವರಿದಿದೆ. ಘಟನೆ ನಡೆದ ದಿನ ಬಂಧನಕ್ಕೆ ಒಳಪಡಿಸಿದ ಏಳು ಜನರ ಕೈಗೆ ಬೇಡಿ ಹಾಕಲಾಯಿತು. ಅವರು ಅಂತಹ ದೊಡ್ಡ ತಪ್ಪು ಏನು ಮಾಡಿದ್ದರೋ ಗೊತ್ತಿಲ್ಲ. ಅಧಿಕಾರಿಗಳು ಸ್ಥಳೀಯರ ಭಾವನೆಗಳಿಗೆ ಬೆಲೆ ಕೊಡಬೇಕೆಂದರು.

**ಜಿಲ್ಲಾಧಿಕಾರಿಗೆ ಸ್ಥಳೀಯರ ಮನವಿ**

ದೇವಸ್ಥಾನದ ಪಾವಿತ್ರ್ಯತೆ ಹಾಗು ಪರಿಸರ ಸಂರಕ್ಷಣೆಗಾಗಿ ಗ್ರಾಮಸ್ಥರು ಜಿಲ್ಲಾಧಿಕಾರಿಗೆ ಹಲವು ಬೇಡಿಕೆಗಳನ್ನು ಸಲ್ಲಿಸಿದರು. ಪೂಜೆ ಸಮಯ ಹೊರತುಪಡಿಸಿ ಪ್ರವಾಸಿಗರಿಗೆ ನಿರ್ಬಂಧ ವಿಧಿಸಬೇಕು. 9 ಗ್ರಾಮಗಳ ಪ್ರತಿನಿಧಿಗಳಿಂದ ಸಮಿತಿ ರಚಿಸಿ ನಿರ್ವಹಣೆಯನ್ನು ಅವರಿಗೆ ಒಪ್ಪಿಸಬೇಕು. ವಸ್ತ್ರ ಸಂಹಿತೆ ಕಡ್ಡಾಯಗೊಳಿಸುವುದು, ಮರುಗುಂದ ಗ್ರಾಮದ ಗಡಿಯಲ್ಲಿ ಚೆಕ್‌ಪೋಸ್ಟ್ ಸ್ಥಾಪಿಸುವುದು, ದೇವಸ್ಥಾನದ ಸುತ್ತಲು ಕನಿಷ್ಟ ಐದು ಎಕರೆ ಪ್ರದೇಶವನ್ನು ಧಾರ್ಮಿಕ ಸೂಕ್ಷ್ಮ ವಲಯವಾಗಿ ಘೋಷಿಸಿ ಫೆನ್ಸಿಂಗ್ ಮಾಡುವುದು, ಶೂ-ಚಪ್ಪಲಿ ಇಡಲು ಪ್ರತ್ಯೇಕ ವ್ಯವಸ್ಥೆ ಕಲ್ಪಿಸುವುದು ಹಾಗು ಕಸದ ನಿರ್ವಹಣೆ ಮತ್ತು ಶೌಚಾಲಯ ಸೇರಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಸೇರಿ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟರು.

### ಕಾನೂನು ಕೈಗೆತ್ತಿಕೊಳ್ಳುವುದು ತಪ್ಪು

ಯಾರೇ ತಪ್ಪು ಮಾಡಿದರೂ ಶಿಕ್ಷಿಸುವ ಅಧಿಕಾರ ಯಾರಿಗೂ ಇಲ್ಲ. ಛಾಯಾಗ್ರಾಹಕರಿಂದ ತಪ್ಪಾಗಿದ್ದರೆ ಅವರನ್ನು ಕಾನೂನು ಶಿಕ್ಷೆಗೆ ಗುರಿಪಡಿಸಬಹುದಿತ್ತು ಎಂದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಛಾಯಾಗ್ರಾಹಕರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಣ್ಣ ವಿಚಾರ ಇಷ್ಟೆಲ್ಲಾ ಗೊಂದಲಕ್ಕೆ ಕಾರಣವಾಗಬಾರದಿತ್ತು. ಪ್ರವಾಸಿ ತಾಣಗಳಲ್ಲಿ ಅಸಭ್ಯವಾಗಿ ವರ್ತಿಸುವುದು ಸರಿಯಲ್ಲ, ಹಾಗಂತೆ ನಾವೇ ಪೊಲೀಸರಂತೆ ಪ್ರತಿಕ್ರಿಯೆ ನೀಡವುದು ತಪ್ಪು ಎಂದರು.

ರಾಜ್ಯ ಮಾತ್ರವಲ್ಲದೆ ವಿದೇಶಿಗರು ಬರುವ ಐತಿಹಾಸಿಕ ಸ್ಥಳ ಇದಾಗಿದೆ. ದೇವಾಲಯ ಮುಜರಾಯಿ ಇಲಾಖೆಗೆ ಸೇರಿದೆಯಾದರೂ ಸಂಪ್ರದಾಯದಂತೆ ಒಂಬತ್ತು ಮನೆತನದವರು ನಿರ್ವಹಣೆ ಮಾಡುತ್ತಾರೆ. ಆದರೆ, ಶುಕ್ರವಾರದ ಘಟನೆ ನೋವು ತರಿಸಿದೆ ಎಂದರು.



# ಕೇಂದ್ರದಿಂದ ಸೌದೆ ಒಲೆ ಯೋಜನೆ: ಡಿ.ಕೆ.ಶಿವಕುಮಾರ್ ವ್ಯಂಗ್ಯ

• ಪ್ರಜೋದಯ ವರದಿ



**ಬೆಂಗಳೂರು:** ಕೇಂದ್ರ ಸರ್ಕಾರ ಜನರಿಗೆ ಉಜ್ವಲ ಯೋಜನೆ ಬದಲಾಗಿ ಸೌದೆ ಒಲೆ ಯೋಜನೆ ನೀಡಿದೆ. ಅಚ್ಛೇ ದಿನ ಏನಾಯ್ತು, ಈಗ ಇರುವುದನ್ನು ಕಚ್ಚಾ ದಿನ ಎಂದು ಹೇಳಬೇಕಾ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವ್ಯಂಗ್ಯವಾಡಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಪಂಚ ರಾಜ್ಯ ಚುನಾವಣೆ ನಡೆಯುತ್ತಿದೆ. ಜನರು ಪರದಾಡುತ್ತಿದ್ದು, ಹೋಟೆಲ್‌ಗಳು ಬಂದ್ ಆಗುತ್ತಿವೆ. ಜನರು ವಿದ್ಯುತ್ ಒಲೆ ಬಳಸುವ ಅನಿವಾರ್ಯತೆ ಎದುರಾಗಿದೆ. ಕಳೆದ 15 ದಿನಗಳಿಂದ ರಾಜ್ಯದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಶೇ.10 ಏರಿಕೆಯಾಗಿದೆ. ಕೇಂದ್ರ ಸರ್ಕಾರ ಜನರಿಗೆ ಸೌದೆ ಭಾಗ್ಯ ನೀಡಿದ್ದು, ಎಲ್ಲಿಂದ ಸೌದೆ ಒದಗಿಸುವುದೆಂದು ಲೇವಡಿ ಮಾಡಿದರು.

ಯುದ್ಧಗಳು ಕೇವಲ ನೆಪವಷ್ಟೇ, ಕೇಂದ್ರ ಸರ್ಕಾರದ ತಪ್ಪು ನಿರ್ಧಾರದಿಂದ ಸಮಸ್ಯೆಯಾಗುತ್ತಿದೆ. ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಮಾತ್ರವಲ್ಲ, ಟೋಲ್ ಶುಲ್ಕ, ರೈಲ್ವೆ ಟಿಕೆಟ್ ದರ ಎಲ್ಲವೂ ಹೆಚ್ಚಾಗಿದೆ. ಕೆಲವು ಅನಿವಾರ್ಯ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಬೆಲೆ ಏರಿಕೆ ತೀರ್ಮಾನ ಮಾಡಿದಾಗ ಯಾವ ರೀತಿ ಟೀಕೆ ಟಿಪ್ಪಣಿ ಬಂದಿವೆ ಎಂದು ಎಲ್ಲರಿಗೂ ಗೊತ್ತಿದೆ. ಸಾಮಾನ್ಯ ಜನರ ಮೇಲೆ ಕೇಂದ್ರ ಸರ್ಕಾರ ಬೆಲೆ ಏರಿಕೆ ಯುದ್ಧ ಮಾಡುತ್ತಿದೆ ಎಂದು ಆರೋಪಿಸಿದರು.

ಜನರನ್ನು ಕೇಂದ್ರ ಸರ್ಕಾರ ಫೂಲ್ ಮಾಡುತ್ತಿದೆ. ನಾವು ಪಾದಯಾತ್ರೆ ಮಾಡಿದಾಗ ಈ ಬೆಲೆ ಏರಿಕೆ ಸಮಸ್ಯೆಯಿಂದ ಜನರು ಕಂಗೆಟ್ಟಿದ್ದು, ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ನಮ್ಮ ಸರ್ಕಾರ ಐದು ಗ್ಯಾರಂಟಿ ಯೋಜನೆ ನೀಡಿ ಅವರಿಗೆ ಶಕ್ತಿ ತುಂಬಿದ್ದೇವೆ. ಈಗ ನಮ್ಮ ಗ್ಯಾರಂಟಿ ಯೋಜನೆಗಳು ಜನರಿಗೆ ಆರ್ಥಿಕವಾಗಿ ರಕ್ಷಣೆ ನೀಡಿವೆ ಎಂದು ಆರೋಪಿಸಿದರು.

900 ಔಷಧಗಳ ದರ ಏರಿಕೆ ಮಾಡಲಾಗಿದೆ. ಶೇ. 12 ಜಿಎಸ್‌ಟಿ ವಿಧಿಸಲಾಗಿದೆ. ಅಗತ್ಯ ವಸ್ತುಗಳಾದ ಪ್ಲಾಸ್ಟಿಕ್ ಪೈಪ್ ಸೇರಿ ಇತರೆ ವಸ್ತುಗಳ ಬೆಲೆಯನ್ನು ಟನ್‌ಗೆ 7 ಸಾವಿರ ಹೆಚ್ಚಳ ಮಾಡಲಾಗಿದೆ. ಕೇಂದ್ರದ ಅವೈಜ್ಞಾನಿಕ ನಿರ್ಧಾರದಿಂದ ಜನರು ಪರಿತಪಿಸುವಂತಾಗಿದೆ ಎಂದರು.


ಸಿಮೆಂಟ್ ಬೆಲೆಯೂ ಸಹ 50 ರಿಂದ 100 ರೂಪಾಯಿಗೆ ಹೆಚ್ಚಳವಾಗಿದೆ. ಇದರ ಹಿಂದೆ ದೊಡ್ಡ ಸಿಮೆಂಟ್ ಮಾಫಿಯಾವೇ ಇದೆ. ಇದನ್ನು ಯಾರು ನಿಯಂತ್ರಣ ಮಾಡುತ್ತಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಕಬ್ಬಿಣದ ಬೆಲೆ 47 ಸಾವಿರದಿಂದ 59 ಸಾವಿರಕ್ಕೆ ಹೆಚ್ಚಳವಾಗಿದೆ. ಹೀಗಾದರೆ ಜನಸಾಮಾನ್ಯ ಮನೆ ಕಟ್ಟುವುದು ಹೇಗೆ. ಇಥರಿಂದ ಸರ್ಕಾರದ ಕಾಮಗಾರಿಗಳಿಗೂ ಹಿನ್ನಡೆಯಾಗುತ್ತಿದೆ. ಅಲ್ಲದೇ ಇದ್ದಕ್ಕಿದ್ದಂತೆ ವಿಮಾನ ಪ್ರಯಾಣದರವನ್ನು ಶೇ.18 ರಷ್ಟು ಏರಿಕೆ ಮಾಡಲಾಗಿದೆ ಎಂದು ಹೇಳಿದರು.

# ಭೂಸ್ವಾಧೀನಕ್ಕೆ ಜಿಲ್ಲಾಡಳಿತ ಮೀನಾ-ಮೇಷ

## ರೈಲ್ವೆ, ಹೆದ್ದಾರಿ ಕಾಮಗಾರಿಗೆ ವಿಳಂಬ: ರೇವಣ್ಣ ಅಸಮಾಧಾನ

• ಪ್ರಜೋದಯ ವರದಿ

**ಬೇಲೂರು:** ಹಾಸನ-ಬೇಲೂರು ರೈಲ್ವೆ ಮಾರ್ಗ ಹಾಗು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಅಗತ್ಯ ಭೂಸ್ವಾಧೀನ ಪ್ರಕ್ರಿಯೆ ನಡೆಸಲು ಜಿಲ್ಲಾಡಳಿತ ಮೀನಾ-ಮೇಷ ಎಣಿಸುತ್ತಿರುವುದರಿಂದ ಕಾಮಗಾರಿ ವಿಳಂಬವಾಗುತ್ತಿದೆ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಅಸಮಾಧಾನ ವ್ಯಕ್ತಪಡಿಸಿದರು.



ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಎಂಟು ವರ್ಷಗಳಿಂದ ಬೇಲೂರು-ಹಾಸನ ರೈಲ್ವೆ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿದೆ. ಇನ್ನೂ ನೂರಾರು ಎಕರೆ ಭೂಸ್ವಾಧೀನವಾಗಿಲ್ಲ. ಪ್ರಶ್ನಿಸಿದರೆ ಅರಣ್ಯ ಇಲಾಖೆ ಅನುಮತಿ ನೀಡುತ್ತಿಲ್ಲವೆಂಬ ಕಾರಣ ಹೇಳಲಾಗುತ್ತಿದೆ ಎಂದು ಟೀಕಿಸಿದರು.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಅವಿರತ ಪ್ರಯತ್ನದಿಂದ ಆರಂಭವಾದ ಹಾಸನ-ಬೇಲೂರು ಚತುಷ್ಪಥ ರಸ್ತೆ ಕಾಮಗಾರಿ ಭೂಸ್ವಾಧೀನದ ಸಮಸ್ಯೆಯಿಂದ ನನೆಗುದಿಗೆ ಬಿದ್ದಿದೆ. ಈ ಕುರಿತು ರಾಜ್ಯ ಸರ್ಕಾರ ಯಾವುದೇ ಸ್ಪಷ್ಟನೆ ನೀಡದೆ ಜಾಣ ಮೌನ ತಾಳಿರುವುದು ಖಂಡನೀಯ. ಜಿಲ್ಲಾಡಳಿತ ಜನಪರ ಕೆಲಸಗಳಿಗಿಂತ ಮುಖ್ಯಮಂತ್ರಿ ಮೆಚ್ಚುಗೆಗಾಗಿ ಕಾರ್ಯಕ್ರಮಗಳನ್ನು ನಡೆಸುವಲ್ಲಿ ತೊಡಗಿಸಿಕೊಂಡಿದೆ. ಕಂದಾಯ ಇಲಾಖೆಯ ಕಾರ್ಯಕ್ರಮಗಳನ್ನು ಸರ್ಕಾರ ದುರುಪಯೋಗಪಡಿಸಿಕೊಂಡಿದ್ದು, ಕಂದಾಯ ದಾಖಲಾತಿ ನೀಡುವ ನೆಪದಲ್ಲಿ ಸಮಾವೇಶಗಳನ್ನು ನಡೆಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಮುಂದಿನ ದಿನಗಳಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಕುರಿತು ಪಕ್ಷದ ವರಿಷ್ಠರು ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧರಾಗಿರುತ್ತೇವೆ. ಅರಸೀಕೆರೆ ಕ್ಷೇತ್ರದಲ್ಲಿ ಸ್ಪರ್ಧೆ ವಿಚಾರವಾಗಿ ಜನರ ಅಭಿಪ್ರಾಯ ಹಾಗು ಪಕ್ಷದ ನಿರ್ಧಾರವೇ ಅಂತಿಮ. 2023ರ ಚುನಾವಣೆಯಲ್ಲಿ ನನ್ನ ವಿರುದ್ಧ ಹೇಳಿಕೆ ನೀಡಿದ ವ್ಯಕ್ತಿಗೆ ಜನತೆ ತಕ್ಕ ಉತ್ತರ ನೀಡಿದ್ದಾರೆಂದು ಪರೋಕ್ಷವಾಗಿ ಪ್ರೀತಮ್‌ಗೌಡ ಅವರಿಗೆ ಟಾಂಗ್ ನೀಡಿದರು.

ಪ್ರತಿವರ್ಷ ನಡೆಯುವ ಚನ್ನಕೇಶವಸ್ವಾಮಿ ಬ್ರಹ್ಮರಥೋತ್ಸವದಲ್ಲಿ ಭಾಗವಹಿಸಿ ದೇವರ ದರ್ಶನ ಪಡೆಯುವುದು ವಾಡಿಕೆಯಾಗಿದೆ. ಈ ವರ್ಷವೂ ದರ್ಶನ ಪಡೆದು ರಾಜ್ಯದಲ್ಲಿ ಉತ್ತಮ ಮಳೆ-ಬೆಳೆ ಆಗಲಿ ಎಂದು ಪ್ರಾರ್ಥನೆ ಸಲ್ಲಿಸಿದ್ದಾಗಿ ತಿಳಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಿ.ಡಿ.ಚಂದ್ರೇಗೌಡ, ಜೆಡಿಎಸ್ ಮುಖಂಡರಿದ್ದರು.

# ವಿಜೃಂಭಣೆಯ ಬೇಲೂರಿನ ಚನ್ನಕೇಶವ ಬ್ರಹ್ಮ ರಥೋತ್ಸವ

• ಪ್ರಜೋದಯ ವರದಿ

- ದೇವಾಲಯ ಆವರಣದಲ್ಲಿ ಮೊಳಗಿದ ಭಕ್ತರ ಜಯಘೋಷ
- ಗಣ್ಯರಿಂದ ವಿಶೇಷ ಪೂಜೆ
- ಇಂದು ನಾಡ ರಥೋತ್ಸವ

**ಬೇಲೂರು:** ವಿಶ್ವಪ್ರಸಿದ್ಧ, ಜಾಗತಿಕ ಮನ್ನಣೆ ಪಡೆದಿರುವ ಶ್ರೀ ಚನ್ನಕೇಶವ ಸ್ವಾಮಿ ಬ್ರಹ್ಮರಥೋತ್ಸವ ಸಹಸ್ರಾರು ಭಕ್ತರ ಜಯಘೋಷಗಳೊಂದಿಗೆ ವಿಜೃಂಭಣೆಯಿಂದ ಮಂಗಳವಾರ ಜರುಗಿತು. ದೇಶಿಗರು ಮಾತ್ರವಲ್ಲದೇ ವಿದೇಶಿಗರು ಕೂಡ ಜಾತ್ರಾ ಮಹೋತ್ಸವವನ್ನು ಕಣ್ತುಂಬಿಕೊಂಡು ಸಂಭ್ರಮಿಸಿದರು.

ಬೆಳಿಗ್ಗೆ 11.05ರ ಸುಮಾರಿಗೆ ಮಿಥುನ ಲಗ್ನದಲ್ಲಿ ಆರಂಭವಾದ ಬ್ರಹ್ಮರಥೋತ್ಸವವು ಗರುಡೋತ್ಸವದ ಬಳಿಕ ರಥಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ನೆರೆದಿದ್ದ ಭಕ್ತರು ಗೋವಿಂದ ಗೋವಿಂದ... ಚನ್ನಕೇಶವ ಸ್ವಾಮಿ ಪಾದ ಗೋವಿಂದ.. ಎಂಬ ಘೋಷಣೆಗಳ ಮೊಳಗಿಸಿದರು.

ದಿವ್ಯ ಬ್ರಹ್ಮರಥೋತ್ಸವ ಆರಂಭಕ್ಕೂ ಮುನ್ನ ಹಿಂದೂಪರ ಸಂಘಟನೆಗಳ ವಿರೋಧದ ನಡುವೆಯೂ ಸಂಪ್ರದಾಯದಂತೆ ದೊಡ್ಡ ಮೇದೂರು ಕಾಜಿ ಖಾದ್ರಿ ಕುಟುಂಬದಿಂದ ದೇವರಿಗೆ ಪ್ರಾರ್ಥನೆ ಸಲ್ಲಿಸಿ ದೇವಾಲಯದ ವತಿಯಿಂದ ಕಾಣಿಕೆ ಸ್ವೀಕರಿಸಿದರು. ರಥೋತ್ಸವ ನಡೆಯುವ ವೇಳೆ ಭಕ್ತರು ರಥಕ್ಕೆ ಧವನ-ಬಾಳೆಹಣ್ಣು ಎಸೆಯುವ ಮೂಲಕ ಭಕ್ತಿ ಮೆರೆದರು. ದೇವಾಲಯದ ಮುಖ್ಯ ರಸ್ತೆ ಸೇರಿ ಇತರೆ ಸ್ಥಳಗಳಲ್ಲಿ ಪ್ರಸಾದ, ತಂಪು ಪಾನೀಯಗಳನ್ನು ಸ್ವಯಂ ಪ್ರೇರಿತವಾಗಿ ವಿತರಿಸಿದ್ದು ಕಂಡು ಬಂದಿತು.

### 15 ದಿನಗಳ ಕಾಲ ಉತ್ಸವ

ಜಾತ್ರೆಯೂ ಪ್ರತಿವರ್ಷ ಯುಗಾದಿಯ ಹೊಸ ದಿನದಿಂದ ಆರಂಭವಾಗಿ ಸತತ 15 ದಿನಗಳ ಕಾಲ ನಡೆಯುವುದು ಇಲ್ಲಿನ ವಿಶೇಷ. ಈ ಅವಧಿಯಲ್ಲಿ ನಡೆಯುವ ಬ್ರಹ್ಮರಥೋತ್ಸವ ಹಾಗು ನಾಡರಥೋತ್ಸವ ತಮ್ಮದೇ ಆದ ವೈಶಿಷ್ಟ್ಯದಿಂದ ಗಮನ ಸೆಳೆಯುತ್ತವೆ. ಯುಗಾದಿಯಿಂದ ಆರಂಭವಾದ ಉತ್ಸವದಲ್ಲಿ ಗರುಡೋತ್ಸವದ ನಂತರವೇ ಬ್ರಹ್ಮರಥೋತ್ಸವಕ್ಕೆ ಚಾಲನೆ ನೀಡುವ ಪರಂಪರೆ ಇದೆ. ಈ ಸಂದರ್ಭದಲ್ಲಿ ಸೌಮ್ಯನಾಯಕಿ, ರಂಗನಾಯಕಿ ಅಮ್ಮನವರ ಸಮೇತ ಕೇಶವಸ್ವಾಮಿ ಕೇಸರಿ ಹೂವಿನ ಅಲಂಕಾರದಲ್ಲಿ ವರ್ಷದಲ್ಲಿ ಒಮ್ಮೆ ಮಾತ್ರ ರಾಜಗೋಪುರದ ಮೂಲಕ ವಿಪ್ರರೊಂದಿಗೆ ಹೊರಬಂದು ಭಕ್ತರಿಗೆ ದರ್ಶನ ನೀಡುವುದು ವಿಶೇಷ ಆಕರ್ಷಣೆಯಾಗಿದೆ.



ಮಾಜಿ ಸಚಿವರಾದ ಹೆಚ್. ಡಿ. ರೇವಣ್ಣ, ಬಿ.ಶಿವರಾಮ್, ಶಾಸಕ ಹೆಚ್.ಕೆ.ಸುರೇಶ್ ಅವರು ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಪುರಸಭೆ ಅಧ್ಯಕ್ಷೆ ಉಷಾ ಸತೀಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ರಾಮಾನುಜ ಸ್ವಾಮೀಜಿ, ತಹಶೀಲ್ದಾರ್ ಶ್ರೀಧರ್ ಕಂಕನವಾಡಿ, ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಕೆ.ಎನ್. ಯೋಗೇಶ್ ಇತರರಿದ್ದರು.

ಈ ಬಾರಿ ಗೊಂದಲ ಆಗದಂತೆ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಸ್ಥಳದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಶ್ರೀನಿಧಿ, ಸಿಪಿಐ ರೇವಣ್ಣ ಜಗದೀಶ್, ಪಿಎಸ್‌ಐ ಸಿ.ಪಾಟೀಲ್ ಶಂಕ್ರಪ್ಪ ಮತ್ತಿತರರು ಭದ್ರತೆ ನೋಡಿಕೊಂಡರು.

# ಕಾಡಾನೆ ಸಿಟ್ಟಿಗೆ ಬೈಕ್‌ಗಳು ಜಖಂ: ಇಟಿಎಫ್ ಸಿಬ್ಬಂದಿ ಪಾರು

• ಪ್ರಜೋದಯ ವರದಿ

**ಸಕಲೇಶಪುರ:** ಮಲೆನಾಡು ಭಾಗದಲ್ಲಿ ಕಾಡಾನೆಗಳ ಉಪಟಳ ಮಿತಿ ಮೀರಿದ್ದು, ತಾಲ್ಲೂಕಿನ ತಾಲ್ಲೂ ಕಿನ ಮತ್ತೂರು ಗ್ರಾಮದಲ್ಲಿ ಎಲಿಫೆಂಟ್ ಟಾಸ್ಕ್ ಫೋರ್ಸ್ (ಇಟಿಎಫ್) ಸಿಬ್ಬಂದಿ ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದು, ಎರಡು ಬೈಕ್‌ಗಳು ಜಖಂಗೊಂಡಿವೆ.



ಗ್ರಾಮದ ಸುತ್ತ ಕಳೆದ ರಾತ್ರಿ ಕಾಡಾನೆಗಳ ಸಂಚಾರ ಕಂಡು ಬಂದಿದ್ದು, ಆನೆಗಳ ಚಲನವಲನ ಪತ್ತೆ ಮಾಡಿ ಗ್ರಾಮಸ್ಥರಿಗೆ ಎಚ್ಚರಿಕೆ ನೀಡಲು ಮಂಗಳವಾರ ಬೆಳಿಗ್ಗೆ 6 ಗಂಟೆಯ ವೇಳೆ ಸಿಬ್ಬಂದಿ ಪ್ರಸನ್ನ ಹಾಗು ಯುವರಾಜ್ ಅವರು ಹೊಂಡಾ ಆಕ್ಟಿವಾ ಮತ್ತು ಬೈಕ್‌ನಲ್ಲಿ ತೆರಳಿದ್ದರು.

ಈ ವೇಳೆ ದಾರಿಯಲ್ಲಿ ಸಾಗುತ್ತಿದ್ದಾಗ ಕಾಡಿನ ಮರೆಯಲ್ಲಿ ಅಡಗಿದ್ದ ಆನೆ ಏಕಾಏಕಿ ರಸ್ತೆಗೆ ನುಗ್ಗಿ ದಾಳಿ ಮಾಡಲು ಮುಂದಾಗಿದೆ. ಆನೆ

» ನಾಲ್ಕನೇ ಪುಟದಲ್ಲಿ

# ಜಿಲ್ಲೆಯ ಇಬ್ಬರು ಪತ್ರಕರ್ತರಿಗೆ ಕೆಯುಡಬ್ಲ್ಯೂಜೆ ವಾರ್ಷಿಕ ಪ್ರಶಸ್ತಿ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ಕಾರ್ಯನಿರತ ಪತ್ರ ಕರ್ತರ ಸಂಘ (ಕೆಯುಡ ಬ್ಲ್ಯೂ ಜೆ)ದ 2024 ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರಕಟಿಸಲಾಗಿದ್ದು, ಜಿಲ್ಲೆಯ ಇಬ್ಬರು ಪತ್ರಕರ್ತರು ಭಾಜನರಾಗಿ ದ್ದಾರೆ.





ಅಭಿವೃದ್ಧಿ, ಸಾಮಾಜಿಕ, ಮಾನವೀಯ ವರದಿ ವಿಭಾಗದ ಪ್ರಶಸ್ತಿಗೆ ದೂರದರ್ಶನ ವಾಹಿನಿಯ ಹಿರಿಯ ವರದಿಗಾರ ಮೋಹನ್‌ಕೃಷ್ಣ ಹಾಗು ತಗಡೂರು ಕಮಲಮ್ಮ- ವೀರೇಗೌಡ ಪ್ರಶಸ್ತಿಯನ್ನು ರೈತರ ಬದುಕು ಬವಣೆ ಕುರಿತ ವರದಿಗೆ ಚನ್ನರಾಯಪಟ್ಟಣದ ಪತ್ರಕರ್ತ ಜಯರಾಮ್ ಪಡೆದಿದ್ದಾರೆ.

ಬೀದರ್‌ನಲ್ಲಿ ಏ.11 ಮತ್ತು 12 ರಂದು ನಡೆಯಲಿರುವ 40 ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದೆಂದು ಸಂಘದ ರಾಜ್ಯಾಧ್ಯಕ್ಷ ಟಿ.ವಿ.ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ತಿಳಿಸಿದ್ದಾರೆ. ಪ್ರಶಸ್ತಿ ಪುರಸ್ಕೃತರನ್ನು ಕೆಯೂಡಬ್ಲ್ಯೂಜೆ ರಾಜ್ಯ ಉಪಾಧ್ಯಕ್ಷ ಎಚ್.ಬಿ.ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಹಾಗು ಸಂಘದ ಎಲ್ಲಾ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

# ಪ್ರವಾಸಿ ತಾಣಗಳ ಅಭಿವೃದ್ಧಿಗೆ ಜಿಲ್ಲಾಡಳಿತ ಮಾಸ್ಟರ್ ಪ್ಲಾನ್

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿ ಹಾಗು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರ ನೇತೃತ್ವದಲ್ಲಿ ಮಂಗಳವಾರ ಹಾನುಬಾಳು ಗ್ರಾಮದ ಪೆಬ್ಬಲ್ಸ್ ಅಂಡ್ ಬೀನ್ಸ್ ರೆಸಾರ್ಟ್‌ನಲ್ಲಿ ವಿವಿಧ ಇಲಾಖೆ ಅಧಿಕಾರಿಗಳ ಸಭೆ ನಡೆಯಿತು.

ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ, ತಾಲ್ಲೂಕಿನ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಕುರಿತು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಸಭೆಯಲ್ಲಿ ಪ್ರಮುಖವಾಗಿ ಮಂಜರಾಬಾದ್ ಕೋಟೆ, ಬೆಟ್ಟದ ಭೈರವೇಶ್ವರ ದೇವಾಲಯ, ಅಬ್ಬಿ ಜಲಪಾತ, ಮೂಕನಮನೆ ಜಲಪಾತ ಹಾಗು ಬಿಸ್ಲೆ ಘಾಟ್ ಪ್ರದೇಶಗಳಲ್ಲಿ ಶೌಚಾಲಯ, ಕುಡಿಯುವ ನೀರು, ಸುಸಜ್ಜಿತ ಪಾರ್ಕಿಂಗ್ ಹಾಗು ಮಾಹಿತಿ ಫಲಕಗಳನ್ನು ಅಳವಡಿಸುವ ಕುರಿತು ಸುದೀರ್ಘ ಚರ್ಚೆ ನಡೆಯಿತು. ಬೆಟ್ಟದ ಭೈರವೇಶ್ವರ ಮತ್ತು ಮಂಜರಾಬಾದ್ ಕೋಟೆ ಬಳಿ ಗ್ರಾಮ ಪಂಚಾಯಿತಿ ವತಿಯಿಂದಲೇ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಚರ್ಚೆ ನಡೆಸಲಾಯಿತು.

ಸಾಹಸ ಪ್ರಿಯರನ್ನು ಸೆಳೆಯುವ ಜೇನುಕಲ್ಲು ಬೆಟ್ಟ, ಹೊಡಚಳ್ಳಿ,



ಬಿಳಿಸಾರೆ, ಮೂರ್ಕಣ್ಣು ಗುಡ್ಡ, ಅಗನಿ ಮತ್ತು ಪಾಂಡವರ ಬೆಟ್ಟಗಳಲ್ಲಿ ಚಾರಣ (ಟ್ರೆಕ್ಕಿಂಗ್) ನಡೆಸಲು ಅಧಿಕೃತ ಅನುಮತಿ ನೀಡುವ ಸಂಬಂಧ ಸಭೆಯಲ್ಲಿ ಸಮಾಲೋಚನೆ ನಡೆಯಿತು. ಪ್ರವಾಸಿ ತಾಣಗಳಲ್ಲಿ ಭದ್ರತೆ ಹಾಗು ಟ್ರಾಫಿಕ್ ನಿಯಂತ್ರಣಕ್ಕೆ ಹೆಚ್ಚಿನ ಒತ್ತು ನೀಡಲಾಗುವುದೆಂದು ತಿಳಿಸಲಾಯಿತು.

ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಪ್ರವಾಸಿ ತಾಣಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲು ಮತ್ತು ಸ್ವಚ್ಛತಾ ಕ್ರಮಗಳನ್ನು ಅನುಷ್ಠಾನಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಅವರು, ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ರೆಸಾರ್ಟ್ ಹಾಗೂ ಹೋಂಸ್ಟೇಗಳು ಪ್ರವಾಸೋದ್ಯಮ ಇಲಾಖೆಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಅಧಿಕೃತ ಅನುಮತಿ ಪಡೆಯಬೇಕೆಂದು ಸೂಚಿಸಿದರು.

ಸಭೆಯಲ್ಲಿ ಪ್ರವಾಸೋದ್ಯಮ, ಅರಣ್ಯ, ಪೊಲೀಸ್ ಹಾಗು ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಇಂದು ಗರ್ಭ ಕೊರಳ ಕ್ಯಾನ್ಸರ್ ಅರಿವು

• ಪ್ರಜೋದಯ ವರದಿ

ಹಾಸನ: ನಗರದ ಸಾಲಗಾಮೆ ರಸ್ತೆಯಲ್ಲಿರುವ ಭಾರತೀಯ ರೆಡ್ ಕ್ರಾಸ್ ಕಚೇರಿಯಲ್ಲಿ ಅಂತರ್‍ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಪೌರ ಕಾರ್ಮಿಕರಿಗೆ ಗರ್ಭ ಕೊರಳ ಹಾಗು ಸ್ತನ ಕ್ಯಾನ್ಸರ್ ತಪಾಸಣೆ ಹಾಗು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, ಮಹಾನಗರ ಪಾಲಿಕೆ, ಭಾರತ ಸೇವಾದಳ, ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರ ಸಂಘ, ಹಾಗು ವಿವಿಧ ಸಂಘಟನೆಗಳಿಂದ ತಪಾಸಣೆ ಹಮ್ಮಿಕೊಳ್ಳಲಾಗಿದ್ದು, ಮಹಾನಗರ ಪಾಲಿಕೆಯ ಎಲ್ಲಾ ಪೌರ ಕಾರ್ಮಿಕ ಮಹಿಳೆಯರು ಪ್ರಯೋಜನ ಪಡೆಯಬೇಕೆಂದು ಭಾರತ ಸೇವಾ ದಳದ ಜಿಲ್ಲಾ ಕಾರ್ಯದರ್ಶಿ ಗಿರೀಶ್ ಚನ್ನವೀರಪ್ಪ ಕೋರಿದ್ದಾರೆ.

## ರಾಜ್ಯದ ವಿವಿಧೆಡೆಯ ನೂರಾರು ಫೋಟೋಗ್ರಾಫರ್ಸ್ ಭಾಗಿ : ಜಿಲ್ಲಾಡಳಿತಕ್ಕೆ ಮನವಿ

# ಛಾಯಾಗ್ರಾಹಕರ ಮೇಲಿನ ಹಲ್ಲೆ ಖಂಡಿಸಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ತಾಲ್ಲೂಕಿನ ಬೆಟ್ಟದ ಭೈರವೇಶ್ವರ ದೇವಸ್ಥಾನದ ಆವರಣದಲ್ಲಿ ಛಾಯಾಗ್ರಾಹಕರ ಮೇಲೆ ಸ್ಥಳೀಯರು ಹಲ್ಲೆ ನಡೆಸಿರುವುದನ್ನು ಖಂಡಿಸಿ ಮಂಗಳವಾರ ರಾಜ್ಯದ ನೂರಾರು ಫೋಟೋಗ್ರಾಫರ್ಸ್ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಸಭೆ ಸೇರಿ ನಂತರ ಮೌನ ಪ್ರತಿಭಟನೆಗೆ ಮುಂದಾದ ನೂರಾರು ಮಂದಿ ಛಾಯಾಗ್ರಾಹಕರು, ಹೇಮಾವತಿ ಪ್ರತಿಮೆ, ಎನ್.ಆರ್.ವೃತ್ತ ಹಾಗು ಬಿ.ಎಂ.ರಸ್ತೆ ಮೂಲಕ ಮೆರವಣಿಗೆಯಲ್ಲಿ ಸಾಗಿ ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ಆಗಮಿಸಿದರು.





ಹಲ್ಲೆ ಆರೋಪಿಗಳಿಗೆ ತಕ್ಷಣ ಕಠಿಣ ಶಿಕ್ಷೆ ವಿಧಿಸಬೇಕು, ಹಾನಿಗೊಳಗಾದ ಛಾಯಾಗ್ರಾಹಕರಿಗೆ ಸಮರ್ಪಕ ಪರಿಹಾರವನ್ನು ಸರ್ಕಾರ ಘೋಷಿಸಬೇಕು. ವೃತ್ತಿಪರ ಛಾಯಾ ಗ್ರಾಹಕರು ಸುರಕ್ಷಿತವಾಗಿ ಕಾರ್ಯ ನಿರ್ವಹಿಸಲು ಸೂಕ್ತ ರಕ್ಷಣೆ ಒದಗಿಸಲು ಕ್ರಮ ಕೈಗೊಳ್ಳಬೇಕು. ಪ್ರಕರಣ ಸಂಬಂಧಿತ ಅಧಿಕಾರಿಗಳು ನ್ಯಾಯ ಸಮ್ಮತ ಹಾಗು ತ್ವರಿತ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ಛಾಯಾಗ್ರಾಹಕರ ಸಂಘ ರಾಜ್ಯಾಧ್ಯಕ್ಷ ಹೆಚ್.ಎಸ್.ನಾಗೇಶ್ ಅವರು ಮಾತನಾಡಿ, ಪ್ರೀ-ವೆಡ್ಡಿಂಗ್ ಫೋಟೋ ಶೂಟಿಂಗ್ ನಡೆಸುವ ವೇಳೆ ವೃತ್ತಿಪರ

» ನಾಲ್ಕನೇ ಪುಟದಲ್ಲಿ

### ಘಟನಾ ಸ್ಥಳದಲ್ಲಿ ಚಿತ್ರೀಕರಣ ಮಾಡದಿರಲು ನಿರ್ಧಾರ

ಪ್ರತಿಭಟನೆಗೂ ಮೊದಲು ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಛಾಯಾಗ್ರಾಹಕರೊಂದಿಗೆ ನಗರದ ಕಸಾಪ ಭವನದಲ್ಲಿ ನಡೆದ ಸಭೆಯಲ್ಲಿ ಫೋಟೋಗ್ರಾಫರ್‌ಗಳ ಮೇಲೆ ಹಲ್ಲೆ ನಡೆದ ಬೆಟ್ಟದ ಭೈರವೇಶ್ವರ ದೇವಸ್ಥಾನದ ಆವರಣದಲ್ಲಿ ಇನ್ಮುಂದೆ ಫೋಟೋ ಶೂಟ್ ಮಾಡದಿರಲು ರಾಜ್ಯ ಸಂಘದಿಂದ ಎಲ್ಲಾ ಛಾಯಾಗ್ರಾಹಕರ ಸಮ್ಮುಖದಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

# ತರಾತುರಿಯಲ್ಲಿ ತೃತೀಯ ಭಾಷೆ ಕೈಬಿಟ್ಟಿದ್ದೇಕೆ?

ದೇಶ ಅಥವಾ ರಾಜ್ಯದ ಅಭಿವೃದ್ಧಿಯ ಸೂಚಕವಾಗಿ ಆ ಭಾಗದ ರಸ್ತೆ, ಆರೋಗ್ಯ, ನೀರಾವರಿ, ಮೂಲಸೌಕರ್ಯ ಸೇರಿದಂತೆ ವಿವಿಧ ಅಂಶಗಳಿರುತ್ತವೆ. ಆದರೆ ಆ ದೇಶ ಅಥವಾ ರಾಜ್ಯದ ಭವಿಷ್ಯವನ್ನು ಶಿಕ್ಷಣ ಕ್ಷೇತ್ರದಿಂದ ಮಾತ್ರ ಕಾಣಲು ಸಾಧ್ಯ. ಆ ಕಾರಣಕ್ಕೆ, ಯಾವ ಸರಕಾರಗಳು ಶಿಕ್ಷಣಕ್ಕೆ ಒತ್ತು ನೀಡುವವೋ ಆ ಪ್ರದೇಶದ ಭವಿಷ್ಯ ಉಜ್ವಲವಾಗಿರುತ್ತದೆ ಎನ್ನುವುದು ಬಹುಜನರ ನಂಬಿಕೆ.

ಈ ಕಾರಣಕ್ಕೆ, ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಬದಲಾವಣೆ ಮಾಡುವ ಮೊದಲು ಹತ್ತಾರು ಆಯಾಮದಲ್ಲಿ ಆಲೋಚಿಸುವುದುಂಟು. ಆದರೆ ಕಳೆದ ಕೆಲ ದಿನಗಳಿಂದ ಕರ್ನಾಟಕದಲ್ಲಿ ಶಿಕ್ಷಣ ಇಲಾಖೆಯ ತೀರ್ಮಾನಗಳು ವಿದ್ಯಾರ್ಥಿಗಳನ್ನಷ್ಟೇ ಅಲ್ಲದೇ ಇಡೀ ರಾಜ್ಯವನ್ನು ಗೊಂದಲಕ್ಕೀಡು ಮಾಡಿವೆ.

ಕಳೆದ ಒಂದು ವಾರದ ಅವಧಿಯಲ್ಲಿ ಶಿಕ್ಷಣ ಇಲಾಖೆಯು ಎರಡು ತೀರ್ಮಾನಗಳನ್ನು ಕೈಗೊಂಡಿದೆ. ಅದರಲ್ಲಿ ಒಂದು, ಒಂದನೇ ತರಗತಿಗೆ ಸೇರಿಸಲು ಮಗುವಿಗೆ ಕಡ್ಡಾಯವಾಗಿ ಆರು ವರ್ಷವಾಗಿರಬೇಕು ಎನ್ನುವ ನಿಯಮದ ಬದಲು 60 ದಿನಗಳ ವಿನಾಯಿತಿಯನ್ನು ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಸೀಮಿತಗೊಳಿಸಿ ತೀರ್ಮಾನಿಸಿದ್ದು, ಮುಂದಿನ ವರ್ಷದ ವೇಳೆಗೆ ಇದಕ್ಕೆ ಕಾಯಿದೆಯ ಮೂಲಕ ಶಾಶ್ವತ ಪರಿಹಾರ ಕಂಡುಕೊಳ್ಳುವುದಾಗಿ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ವಿನಾಯಿತಿಯ ಅವಧಿಯನ್ನು ಎರಡು ತಿಂಗಳ ಬದಲು ಮೂರು ಅಥವಾ ನಾಲ್ಕು ತಿಂಗಳಿಗೆ ಏರಿಸಬಹುದು ಎನ್ನುವ ವಾದವಿದೆ. ಮುಂದಿನ ವರ್ಷದ ವೇಳೆಗೆ ಈ ಸಮಸ್ಯೆ ಬಗೆಹರಿಯಬಹುದು. ಈ ತೀರ್ಮಾನದ ಪರ-ವಿರೋಧ ಚರ್ಚೆ ಮುಗಿಯುವ ಮೊದಲೇ, ತುರ್ತು ಸುದ್ದಿಗೋಷ್ಠಿಯ ನೆಪದಲ್ಲಿ ಮಧು ಬಂಗಾರಪ್ಪ ಅವರು ಘೋಷಿಸಿದ ತೃತೀಯ ಭಾಷೆ ಆಟಕ್ಕುಂಟು-ಲೆಕ್ಕಕ್ಕಿಲ್ಲ ಎನ್ನುವ ತೀರ್ಮಾನ ಇದೀಗ ತೀವ್ರ ಚರ್ಚೆ, ವಿರೋಧಕ್ಕೆ ಕಾರಣವಾಗಿದೆ.




ವಿದ್ಯಾರ್ಥಿಗಳ ಮೇಲಿನ ಹೊರೆಯನ್ನು ತಗ್ಗಿಸಬೇಕು ಎನ್ನುವ ಕಾರಣಕ್ಕೆ ಹಾಗೂ ಕರ್ನಾಟಕ ದಲ್ಲಿ ಹಿಂದಿ ಹೇರಿಕೆಯನ್ನು ಸಹಿಸುವುದಿಲ್ಲ ಎನ್ನುವ ಸಂದೇಶ ರವಾನಿಸಬೇಕು ಎನ್ನುವ ಕಾರಣಕ್ಕೆ ತೃತೀಯ ಭಾಷೆಯ ಅಂಕವನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಪರಿಗಣಿಸುವ ಬದಲು ಗ್ರೇಡಿಂಗ್ ಕೊಟ್ಟು ಕೈತೊಳೆದುಕೊಳ್ಳುವುದಾಗಿ ಇಲಾಖೆ ಹೇಳಿದೆ. ಈ ತೀರ್ಮಾನಕ್ಕೆ ಬೆಂಬಲವಾಗಿ ತೃತೀಯ ಭಾಷೆ ಹಿಂದಿಯ ಕಾರಣಕ್ಕಾಗಿಯೇ ಕರ್ನಾಟಕದಲ್ಲಿ 90 ಸಾವಿರ ವಿದ್ಯಾರ್ಥಿಗಳು ಫೇಲಾಗಿದ್ದಾರೆ. ಆದ್ದರಿಂದ ಇಂಥ ಹೇರಿಕೆಯ ಅಗತ್ಯವೇನು ಎನ್ನುವ ಮಾತುಗಳು ಕೇಳಿ ಬರುತ್ತಿದೆ.

ಸರಕಾರದ ಈ ತೀರ್ಮಾನದಿಂದ ವಿದ್ಯಾರ್ಥಿಗಳ ಮೇಲಿನ ಹೆಚ್ಚುವರಿ ಹೊರೆ ತಗ್ಗಲಿದ್ದು, ಆಸಕ್ತಿ ಇದ್ದವರು ಹಿಂದಿಯನ್ನು ಕಲಿತುಕೊಳ್ಳಲಿದ್ದಾರೆ ಎನ್ನುವುದು ಕನ್ನಡ ಹೋರಾಟ ಗಾರರ, ಕನ್ನಡಾಭಿಮಾನಿಗಳ, ಸರಕಾರದ ನಿಲುವಾಗಿದೆ. ಇಲಾಖೆ ತೆಗೆದುಕೊಂಡಿರುವ ಈ ತೀರ್ಮಾನದ ಸಾಧಕ-ಬಾಧಕದ ಬಗ್ಗೆ ಚರ್ಚಿಸುವುದಕ್ಕಿಂತ ತೆಗೆದುಕೊಂಡ ಸಮಯದ ಬಗ್ಗೆ ಈಗ ವಿರೋಧ ವ್ಯಕ್ತವಾಗುತ್ತಿದೆ.

ಒಂದು ವೇಳೆ ಕರ್ನಾಟಕದಲ್ಲಿ ದ್ವಿಭಾಷಾ ಸೂತ್ರದಲ್ಲಿಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ನಡೆಸಬೇಕು ಎನ್ನುವ ಆಲೋಚನೆ ಇದ್ದಿದ್ದರೆ ಅದನ್ನು ಪರೀಕ್ಷೆ ಘೋಷಿಸುವ ಮೊದಲೇ ಸ್ಪಷ್ಟಪಡಿಸಬೇಕಿತ್ತು. ಇಲ್ಲವಾದರೆ, ಈ ಶೈಕ್ಷಣಿಕ ವರ್ಷದ ಬಳಿಕ ತೀರ್ಮಾನಿಸಬಹುದಾಗಿತ್ತು. ಆದರೆ ಅದನ್ನು ಮಾಡದೇ ಪರೀಕ್ಷೆ ನಡೆಯುತ್ತಿರುವ ಸಮಯದಲ್ಲಿಯೇ ಈ ರೀತಿಯ ಗ್ರೇಡಿಂಗ್ ವ್ಯವಸ್ಥೆ ಪರಿಚಯಿಸುವ ಅವಸರವೇನಿತ್ತು? ಎನ್ನುವ ಪ್ರಶ್ನೆಗೆ ಈವರೆಗೆ ಸರಕಾರದಿಂದ ಯಾವುದೇ ಉತ್ತರ ಬಂದಿಲ್ಲ.

ಇನ್ನು ಶಿಕ್ಷಣ ಇಲಾಖೆ ತೃತೀಯ ಭಾಷೆಯ ವಿಷಯದಲ್ಲಿ ತೆಗೆದುಕೊಂಡಿರುವ ಏಕಾಏಕಿ ತೀರ್ಮಾನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರತಿಪಕ್ಷ ಬಿಜೆಪಿ ನಾಯಕರು ಸೇರಿದಂತೆ ಬಹುತೇಕರು ಹಿಂದಿ ಭಾಷೆಗೆ ಸೀಮಿತಗೊಳಿಸಿ ಮಾತನಾಡುತ್ತಿದ್ದಾರೆ.

ಕರ್ನಾಟಕದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಅನೇಕ ವಿದ್ಯಾರ್ಥಿಗಳು ತೃತೀಯ ಭಾಷೆಯಾಗಿ ಕೇವಲ ಹಿಂದಿಯನ್ನಲ್ಲ, ಕನ್ನಡವನ್ನೂ ತೆಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ಬಹುತೇಕರು ಆಲೋಚಿಸದಿರುವುದು ಮಾತ್ರ ದುರಂತ!

ರಾಜ್ಯದ ಎಲ್ಲ ಕಡೆಯೂ ಹಿಂದಿಯೇ ತೃತೀಯ ಭಾಷೆಯಲ್ಲ, ಕೆಲವು ನಗರ ಪ್ರದೇಶಗಳಲ್ಲಿ ಕನ್ನಡವೂ ಸೇರಿ ಹಲವು ಭಾಷೆಗಳು ತೃತೀಯ ಭಾಷೆಯಾಗಿವೆ. ಹಿಂದಿಯೂ ಸೇರಿದಂತೆ ಕನ್ನಡ, ಇಂಗ್ಲಿಷ್, ಅರಬ್ಬಿ, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಮರಾಠಿ ಭಾಷೆಗಳನ್ನೂ ತೃತೀಯ ಭಾಷೆಯಾಗಿ ಲಕ್ಷಾಂತರ ಮಕ್ಕಳು ಕಲಿಯುತ್ತಿದ್ದಾರೆ.

ಮೊದಲ ಭಾಷೆಯಾಗಿ ಉರ್ದು, ಸಂಸ್ಕೃತವನ್ನು ತೆಗೆದುಕೊಂಡಿರುವ ವಿದ್ಯಾರ್ಥಿಗಳಿಗೆ ಕನ್ನಡವೇ ತೃತೀಯ ಭಾಷೆಯಾಗಿರಲಿದೆ. ಹೀಗಿರುವಾಗ, ಹಿಂದಿ ಹೇರಿಕೆಯನ್ನು ತಗ್ಗಿಸುವ ನೆಪದಲ್ಲಿ ಕನ್ನಡವನ್ನು ಭವಿಷ್ಯದಲ್ಲಿ ನೇಪಥ್ಯಕ್ಕೆ ಸರಿಸುವುದು ಕೆಟ್ಟ ತೀರ್ಮಾನವಾಗುವುದಿಲ್ಲವೇ? ಸರಕಾರ ಈಗ ತೆಗೆದುಕೊಂಡಿರುವ ತೀರ್ಮಾನವನ್ನು ಕೇವಲ ಹಿಂದಿಗೆ ಸೀಮಿತಗೊಳಿಸಲು ಕಾನೂನಾತ್ಮಕವಾಗಿ ಸಾಧ್ಯವಿಲ್ಲ.

ಆದ್ದರಿಂದ ಹಿಂದಿ ಹೇರಿಕೆಯನ್ನು ತಗ್ಗಿಸಲು ಹೋಗಿ, ಅನಿವಾರ್ಯವಾಗಿ ಮೂರನೇ ಭಾಷೆಯಾಗಿ ಆದರೂ ಕನ್ನಡವನ್ನು ಕಲಿಯುತ್ತಿದ್ದ ಅನೇಕರಿಗೆ ಸರಕಾರವೇ, ಕನ್ನಡ ಕಲಿಕೆ ಅನಿವಾರ್ಯವಲ್ಲ ಎನ್ನುವ ಸ್ಥಿತಿ ನಿರ್ಮಿಸಿದಂತೆ ಆಗಲಿಲ್ಲವೇ? ಹೋಗಲಿ, ಈ ತೀರ್ಮಾನ ಘೋಷಿಸುವ ಮೊದಲು ಸಚಿವ ಸಂಪುಟ ಸಭೆಯಲ್ಲಿ ಕನಿಷ್ಠ ಚರ್ಚೆ, ತಜ್ಞರ ಸಮಿತಿಯಿಂದ ಸಲಹೆಗಳನ್ನು ಪಡೆಯದೇ ಅಥವಾ ಶಿಕ್ಷಣ ಕ್ಷೇತ್ರದ ಪ್ರಮುಖರೊಂದಿಗೆ ಈ ರೀತಿಯ ನಿರ್ಧಾರದಿಂದ ಆಗುವ ಪರಿಣಾಮಗಳೇನು ಎನ್ನುವ ಬಗ್ಗೆ ಚರ್ಚಿಸದೇ ಘೋಷಿಸುವಷ್ಟು ತರಾತುರಿ ಮಾಡಿದ್ದೇಕೆ? ಈ ಪ್ರಮಾಣದ ತರಾತುರಿಯಲ್ಲಿ ಎಸ್‌ಎಸ್‌ಎಲ್‌ಸಿ ತೃತೀಯ ಭಾಷಾ ಪರೀಕ್ಷೆಯನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತೆ ಮಾಡಿದ ರಾಜ್ಯ ಸರಕಾರ, ಒಂದನೇ ತರಗತಿ ಸೇರ್ಪಡೆಗೆ ವಯಸ್ಸನ್ನು ನಿಗದಿಪಡಿಸುವ ವಿಷಯದಲ್ಲಿ ಕಳೆದ ಮೂರು ವರ್ಷಗಳಿಂದ ಪ್ರತಿವರ್ಷ ವಿವಾದ, ಗೊಂದಲ ಸೃಷ್ಟಿಸಿಕೊಂಡು ಕೊನೆಗೆ ತಾತ್ಕಾಲಿಕ ರಿಲೀಫ್ ನೀಡುತ್ತಾ ಬಂದಿದೆ.

ಅಧಿಕಾರಕ್ಕೆ ಬರುವ ಮೊದಲು, ಬಂದ ಬಳಿಕ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಒಪ್ಪುವುದಿಲ್ಲ ಎಂದೇ ಹೇಳುತ್ತಿರುವ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು, ಒಂದನೇ ತರಗತಿಯ ಸೇರ್ಪಡೆಯ ವಿಷಯದಲ್ಲಿ ಮಾತ್ರ ಎನ್‌ಇಪಿ ಮಾರ್ಗಸೂಚಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಒಂದನೇ ತರಗತಿ ಸೇರಲು ಜೂನ್ 1ಕ್ಕೆ ಮಗುವಿನ ವಯಸ್ಸು ಕಡ್ಡಾಯವಾಗಿ ಆರು ವರ್ಷ ಪೂರೈಸಿರಬೇಕು ಎನ್ನುವ ನಿಯಮವಿದೆ. ಇದರಿಂದ ಜೂನ್ 1ರ ಬಳಿಕ ಬಹುತೇಕ ಮಕ್ಕಳಿಗೆ ಒಂದು ವರ್ಷ ನಷ್ಟವಾಗುತ್ತದೆ.

ಉದಾಹರಣೆಗೆ ಜೂನ್ 10ಕ್ಕೆ ಜನಿಸುವ ಮಗುವು 2026ರ ಜೂನ್ 10ಕ್ಕೆ ಆರು ವರ್ಷ ಪೂರೈಸಿದರೆ, ಆ ಮಗು 2027ರ ಜೂನ್ ತನಕ ಕಾಯಬೇಕಾದ ಕಠಿಣ ನಿಲುವಿತ್ತು. ಈ ಕಟ್ ಆಫ್‌ನಿಂದಾಗಿ ಪ್ರತಿವರ್ಷ ಲಕ್ಷಾಂತರ ಮಕ್ಕಳಿಗೆ ಒಂದೆರಡು ತಿಂಗಳ ಅಂತರಕ್ಕೆ ಇಡೀ ವರ್ಷ ಮನೆಯಲ್ಲಿಯೇ ಕಳೆಯಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ.

ಆದ್ದರಿಂದ ಐದು ವರ್ಷ 10 ತಿಂಗಳಾದ ಮಗುವಿಗೂ ಒಂದನೇ ತರಗತಿ ಸೇರ್ಪಡೆಗೆ ಅವಕಾಶ ನೀಡಬೇಕು ಎನ್ನುವ ಆಗ್ರಹಗಳು ಕಳೆದ ಎರಡು ವರ್ಷಗಳಿಂದ ಕೇಳಿ ಬರುತ್ತಿವೆ. ಹಾಗೆ ನೋಡಿದರೆ, ಐದು ವರ್ಷ 10 ತಿಂಗಳ ನಿಯಮ ಹಲವು ದಶಕಗಳಿಂದ ಕರ್ನಾಟಕ ದಲ್ಲಿ ಜಾರಿಯಲ್ಲಿದೆ. ಆದರೆ ಎನ್‌ಇಪಿ ಜಾರಿಯಾದ ಬಳಿಕ ಆರು ವರ್ಷವೆಂದು ಕಡ್ಡಾಯ ಗೊಳಿಸಲಾಯಿತು.

ಕಳೆದ ವರ್ಷ ತೀವ್ರ ವಿವಾದವಾದ ಬಳಿಕ ಎರಡು ತಿಂಗಳ ವಿನಾಯಿತಿ ನೀಡಲಾಗಿತ್ತು. ಈ ವರ್ಷವೂ ಡಿಸೆಂಬರ್‌ನಿಂದಲೇ ಗಲಾಟೆ ಶುರುವಾದರೂ, ಕೊನೆಗೆ ತೀರ್ಮಾನ ಕೈಗೊಂಡಿದ್ದು ಮಾತ್ರ ಕಳೆದ ವಾರ.




ಹಾಗೆ ನೋಡಿದರೆ, ಒಂದನೇ ತರಗತಿ ಸೇರಲು ವಯೋಮಿತಿಯ ವಿಷಯದಲ್ಲಿ ಸರಕಾರದ ತೀರ್ಮಾನ ಕೊಂಚ ಕಠಿಣವಾಗಿದೆ. ಏಕೆಂದರೆ, ಸದ್ಯ ಎರಡು ತಿಂಗಳ ವಿನಾಯಿತಿ ನೀಡಿದ್ದರೂ, ಆಗಸ್ಟ್‌ನಿಂದ ಡಿಸೆಂಬರ್ ಅವಧಿಯಲ್ಲಿ ಜನಿಸುವ ಮಗು ಒಂದನೇ ತರಗತಿ ಸೇರಲು ಅಗತ್ಯವಿರುವಷ್ಟು ಬುದ್ಧಿಮತ್ತೆಯಿದ್ದರೂ ನಿಯಮದ ಕಾರಣಕ್ಕೆ ಸೇರ್ಪಡೆ ಮಾಡದಿರುವುದು ಸರಿಯಲ್ಲ.

ನಾಲ್ಕೈದು ತಿಂಗಳಿನ ವ್ಯತ್ಯಾಸವು ಮಗುವಿನ ಅಭ್ಯಾಸಕ್ಕೆ ಬಹುದೊಡ್ಡ ವ್ಯತ್ಯಾಸವನ್ನೇನೂ ಮಾಡುವುದಿಲ್ಲ ಎನ್ನುವುದು ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ಅಮೆರಿಕ, ಯುಕೆ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಐದು ವರ್ಷಕ್ಕೆ ಶಾಲೆಗಳಿಗೆ ಪ್ರವೇಶ ನೀಡಿದರೆ, ಫಿನ್‌ಲ್ಯಾಂಡ್, ಸ್ವೀಡನ್‌ನಂಥ ರಾಷ್ಟ್ರಗಳಲ್ಲಿ ಏಳು ವರ್ಷಕ್ಕೆ ಮಕ್ಕಳನ್ನು ಶಾಲೆಗೆ ಸೇರಿಸಲಾಗುತ್ತಿದೆ. ಆದರೆ ಭಾರತ ಸೇರಿದಂತೆ ಬಹುತೇಕ ರಾಷ್ಟ್ರಗಳು ಆರು ವರ್ಷದ ನಿಯಮವನ್ನು ಜಾರಿಗೊಳಿಸಿವೆ.

ಆರು ವರ್ಷಕ್ಕೆ ಶಾಲಾ ಶಿಕ್ಷಣ ಆರಂಭಿಸುವುದು ಸೂಕ್ತವಾದರೂ, ಕಡ್ಡಾಯವಾಗಿ ಆರು ವರ್ಷ ಆಗಿರಬೇಕು ಎನ್ನುವುದು ಈಗಿರುವ ಗೊಂದಲ ಹಾಗೂ ವಿವಾದಕ್ಕೆ ಕಾರಣ ಎಂದರೆ ತಪ್ಪಾಗುವುದಿಲ್ಲ.

ಶಿಕ್ಷಣ ಇಲಾಖೆಯು ಎಸ್‌ಎಸ್‌ಎಲ್‌ಸಿ ತೃತೀಯ ಭಾಷಾ ವಿನಾಯಿತಿ ವಿಷಯದಲ್ಲಿ ನಿರ್ಧಾರವನ್ನು ತೆಗೆದುಕೊಂಡಷ್ಟು ವೇಗವಾಗಿ ಮಕ್ಕಳ ಶಾಲಾ ಪ್ರವೇಶಾತಿ ವಿಷಯದಲ್ಲಿ ತೆಗೆದುಕೊಳ್ಳಲಿಲ್ಲ ಎನ್ನುವುದು ಎರಡನೇ ಮಾತು. ಆದರೆ ಒಂದನೇ ತರಗತಿಗೆ ಆರು ವರ್ಷ ಕಡ್ಡಾಯ ಎನ್ನುವ ನಿಯಮವನ್ನು ಪ್ರತಿವರ್ಷ ಟಾಪ್‌ಅಪ್ ರೀತಿ ಮಾಡುವ ಬದಲು ಶಾಶ್ವತ ಕಾಯಿದೆಯನ್ನು ರೂಪಿಸುವ ಅನಿವಾರ್ಯತೆಯಿದೆ.

ಇದರೊಂದಿಗೆ ಒಂದನೇ ತರಗತಿಗಷ್ಟೇ ಅಲ್ಲದೇ, ಎಲ್‌ಕೆಜಿ, ಯುಕೆಜಿ ವಿಷಯದಲ್ಲಿಯೂ ಸರಕಾರಗಳು ಸ್ಪಷ್ಟ ನಿಲುವಿಗೆ ಬರಬೇಕಿದೆ. ಇಲ್ಲದೇ ಹೋದರೆ, ಮೂರುವರೆ ವರ್ಷಕ್ಕೆ ಎಲ್ಕೆಜಿ ಸೇರಿ, ನಾಲ್ಕೂವರೆ ವರ್ಷಕ್ಕೆ ಯುಕೆಜಿಗೆ ಬರುವ ವಿದ್ಯಾರ್ಥಿ ಐದೂವರೆ ವರ್ಷಕ್ಕೆ ಯುಕೆಜಿ ಮುಗಿಸುತ್ತಾನೆ. ಆಗ ಈ ಆರು ವರ್ಷ ಕಡ್ಡಾಯ ಎನ್ನುವ ನಿಯಮದಿಂದ ವಿದ್ಯಾರ್ಥಿಗಳು ಯುಕೆಜಿಯಲ್ಲಿಯೇ ಹೆಚ್ಚುವರಿ ಒಂದು ವರ್ಷ ಕಲಿಯಬೇಕಾದ ಅಥವಾ ಒಂದು ವರ್ಷ ಮನೆಯಲ್ಲಿಯೇ ಕೂರಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ.

> ವಿದ್ಯಾರ್ಥಿಗಳ ಮೇಲಿನ ಹೊರೆಯನ್ನು ತಗ್ಗಿಸಬೇಕು ಎನ್ನುವ ಕಾರಣಕ್ಕೆ ಹಾಗೂ ಕರ್ನಾಟಕ ದಲ್ಲಿ ಹಿಂದಿ ಹೇರಿಕೆಯನ್ನು ಸಹಿಸುವುದಿಲ್ಲ ಎನ್ನುವ ಸಂದೇಶ ರವಾನಿಸಬೇಕು ಎನ್ನುವ ಕಾರಣಕ್ಕೆ ತೃತೀಯ ಭಾಷೆಯ ಅಂಕವನ್ನು ಎಸ್ ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಪರಿಗಣಿಸುವ ಬದಲು ಗ್ರೇಡಿಂಗ್ ಕೊಟ್ಟು ಕೈತೊಳೆದುಕೊಳ್ಳುವುದಾಗಿ ಇಲಾಖೆ ಹೇಳಿದೆ.

ಇದರಿಂದಾಗಿ ಮಗುವಿನ ಮನಸ್ಸಿನ ಮೇಲೆ ಆಗಬಹುದಾದ ಪರಿಣಾಮಗಳ ಬಗ್ಗೆ ಸರಕಾರ ಎಚ್ಚರವಹಿಸಬೇಕಿದೆ. ಶಿಕ್ಷಣ ಕ್ಷೇತ್ರದಲ್ಲಿ ತೆಗೆದುಕೊಳ್ಳುವ ಯಾವುದೇ ತೀರ್ಮಾನ ಕೇವಲ ಒಬ್ಬ ವ್ಯಕ್ತಿ ಅಥವಾ ಕುಟುಂಬದ ಮೇಲೆ ಪರಿಣಾಮವನ್ನು ಬೀರುವುದಿಲ್ಲ. ಬದಲಿಗೆ ಇಡೀ ಸಮುದಾಯದ ಮೇಲೆ ಅದಕ್ಕೂ ಮಿಗಿಲಾಗಿ ನಾಡಿನ ಭವಿಷ್ಯದ ಮೇಲೆ ತೀವ್ರ ಹೊಡೆತ ಬೀಳುವ ಅಪಾಯವಿರುತ್ತದೆ.

ಆಡಳಿತ ಮೊಗಸಾಲೆಯಲ್ಲಿರುವ ಸರಕಾರಗಳು ತಮ್ಮ ಸೈದ್ಧಾಂತಿಕ ನಿಲುವುಗಳಿಗೆ ಸರಿ ಹೊಂದುವ ರೀತಿಯಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವುದನ್ನು ನೋಡಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿಯೂ ಇದೇ ರೀತಿಯ ಹತ್ತು ಹಲವು ತೀರ್ಮಾನಗಳನ್ನು ತೆಗೆದು ಕೊಂಡಿರುವುದಕ್ಕೆ ಉದಾಹರಣೆಗಳಿವೆ.

ನಾಲ್ಕೈದು ವರ್ಷದಲ್ಲಿ ಕರ್ನಾಟಕದಲ್ಲಿಯೇ ಆಗಿರುವ ವಿಷಯವನ್ನು ನೋಡುವುದಾದರೆ, ಈ ಹಿಂದಿದ್ದ ಬಿಜೆಪಿ ಸರಕಾರ ಇಡೀ ರಾಷ್ಟ್ರದಲ್ಲಿ ಎನ್‌ಇಪಿ ಜಾರಿಗೊಳಿಸಿದ ಮೊದಲ ರಾಜ್ಯ ಎನ್ನುವ ಹೆಮ್ಮೆ ಪಡೆಯಬೇಕು. ಈ ಮೂಲಕ ದೆಹಲಿ ನಾಯಕರನ್ನು ಒಲೈಸಬೇಕು ಎನ್ನುವ ಕಾರಣಕ್ಕೆ ತಯಾರಿ ಇಲ್ಲದೇ ಎನ್‌ಇಪಿ ಜಾರಿಗೊಳಿಸಿತ್ತು.

ಇದಾಗುತ್ತಿದ್ದಂತೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನಾಯಕರು ಎನ್‌ಇಪಿ ಬದಲು ಎಸ್‌ಇಪಿ (ರಾಜ್ಯ ಶಿಕ್ಷಣ ನೀತಿ) ಜಾರಿಗೊಳಿಸುವುದಾಗಿ ಘೋಷಿಸಿ, ಅದಕ್ಕೊಂದು ಸಮಿತಿಯನ್ನು ರಚಿಸಿದ್ದರು. ಈ ಸಮಿತಿಯ ವರದಿಯಲ್ಲೇನಿದೆ? ಅದನ್ನು ಯಾವ ರೀತಿಯಲ್ಲಿ ಜಾರಿಗೊಳಿಸ ಬೇಕು ಎನ್ನುವ ಆಲೋಚನೆ ಮಾಡುವ ಮೊದಲೇ ಎನ್‌ಇಪಿಯನ್ನು ರದ್ದುಗೊಳಿಸಿರುವು ದಾಗಿ ಸರಕಾರ ಘೋಷಿಸಿದೆ.

ಸದ್ಯ ಇತ್ತ ಎನ್‌ಇಪಿ ಇಲ್ಲದೇ, ಅತ್ತ ಎಸ್‌ಇಪಿ ಇಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ರಾಜ್ಯದ, ರಾಷ್ಟ್ರದ ಭವಿಷ್ಯವನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ನಾಯಕರು ತಮ್ಮ ಸಿದ್ಧಾಂತ, ರಾಜಕೀಯ ಲಾಭ-ನಷ್ಟದಲ್ಲಿಯೇ ತೀರ್ಮಾನಿಸುವ ಬದಲು ಇಂದಿನ ದಿನಮಾನಕ್ಕೆ ಶಿಕ್ಷಣ ಕ್ಷೇತ್ರಕ್ಕೆ ಬೇಕಿರುವುದೇನು ಎನ್ನುವ ನಿಟ್ಟಿನಲ್ಲಿ ಆಲೋಚಿಸಿ ತೀರ್ಮಾನಿಸಬೇಕಿದೆ. ಈ ವಿಷಯದಲ್ಲಿ ಸಿದ್ಧಾಂತ ಮೀರಿದ ಶಿಕ್ಷಣ ತಜ್ಞರೊಂದಿಗಿನ ಚರ್ಚೆ ಇಂದಿನ ಅಗತ್ಯವೆಂದರೆ ತಪ್ಪಾಗುವುದಿಲ್ಲ.

**- ರಂಜಿತ್ ಎಚ್ ಅಶ್ವತ್ಥ್**

---

■ **ಏಪ್ರಿಲ್ ತಿಂಗಳ 1ನೇ ತಾರೀಖನ್ನು ಏಪ್ರಿಲ್ ಫೂಲ್ಸ್ ಡೇ ಅರ್ಥಾತ್ ಮೂರ್ಖರ ದಿನಾಚರಣೆ ಎಂದು ಕರೆಯಲಾಗಿದೆ. ವಿಶ್ವದ ಬಹುತೇಕ ಭಾಗಗಳಲ್ಲಿ ಒಬ್ಬರನ್ನೊಬ್ಬರು ಗೇಲಿ ಕುಚೋದ್ಯದ ಮೂಲಕ ತಮಾಷೆ ಮಾಡಿ ಮೂರ್ಖರನ್ನಾಗಿ ಮಾಡಿ ನಗುವುದು ನಗಿಸುವುದು ಪೂರ್ವದಿಂದಲೂ ನಡೆದುಬಂದಿದೆ.**

# ನಾವು ಏಪ್ರಿಲ್ ಫೂಲ್ ಆದ ಆ ದಿನಗಳು..!

ಏಪ್ರಿಲ್ 1ರಂದು ಮೂರ್ಖರನ್ನಾಗಿಸುವ ರೂಢಿಗೆ ಹಲವಾರು ಕಥೆಗಳಿವೆ. ಏಪ್ರಿಲ್ 1ರಂದು ಮೂರ್ಖರನ್ನಾಗಿಸುವ ಈ ಪದ್ಧತಿ ರೋಮನ್‌ರಿಂದ ನಡೆದು ಬಂದಿದೆ. ಬಹಳ ವರ್ಷಗಳ ಹಿಂದೆ ರೋಮನ್ನರ ಹೊಸ ವರ್ಷ ಆರಂಭವಾಗುತ್ತಿದ್ದುದು ಮಾರ್ಚ್ 1ರಿಂದ. ನಂತರ ಬಂದ ರೋಮನ್ ಚಕ್ರವರ್ತಿ ಆವರೆಗಿನ ರೂಢಿಯ ದಿನವನ್ನು ಬದಲಾಯಿಸಿ ಏಪ್ರಿಲ್ ತಿಂಗಳ ಮೊದಲ ದಿನವನ್ನು ವರ್ಷದ ಮೊದಲ ದಿನವೆಂದು ಪರಿಗಣಿಸಿ ಆಚರಿಸುವಂತೆ ಆಜ್ಞೆ ಮಾಡಿದ. ಪ್ರಜೆಗಳಿಗಿದು ಸರಿ ಕಾಣಲಿಲ್ಲ. ಪರಿಣಾಮ ಅವರು ಚಕ್ರವರ್ತಿಯನ್ನು ಮೂರ್ಖನೆಂದು ಪರಿಗಣಿಸಿದರು. ಆ ಕಾರಣವಾಗಿ ರೋಮನ್‌ನಲ್ಲಿ ಏಪ್ರಿಲ್ ತಿಂಗಳ ಮೊದಲ ದಿನವು ಮೂರ್ಖರ ದಿನವೆಂದು ಪರಗಣಿಸಲ್ಪಟ್ಟು ಆಚರಣೆಗೆ ಮೊದಲಾಯಿತು. ರೋಮನ್‌ರು ಅದನ್ನು ಮೊದಲಿಗೆ ಒಂದು ಹಬ್ಬದ ರೂಪದಲ್ಲಿ ಆಚರಿಸುತ್ತಿದ್ದರು. ಆಗದು ಆ ದೇಶಕ್ಕೆ ಮಾತ್ರ ಸೀಮಿತವಾಗಿತ್ತು. ಆನಂತರ ಅದು ಇತರ ದೇಶಗಳಿಗೂ ಹಬ್ಬಿತು. ಫ್ರಾನ್ಸ್ ದೇಶದಲ್ಲಿ ನೂತನ ವರ್ಷವು ಏಪ್ರಿಲ್ 1ರಂದು ಆರಂಭವಾಗುತ್ತಿತ್ತು. ಕ್ರಿ.ಶ.1564ರಲ್ಲಿ ಫ್ರಾನ್ಸ್ ದೇಶದಲ್ಲಿ ಜಗತ್ತಿನ ಮೊಟ್ಟಮೊದಲ ಕ್ಯಾಲೆಂಡರ್ ಅಸ್ತಿತ್ವಕ್ಕೆ ಬಂತು. ಕ್ಯಾಲೆಂಡರಿನಲ್ಲಿ ಏಪ್ರಿಲ್ 1ರ ಬದಲಾಗಿ ಜನವರಿ 1 ಹೊಸ ವರ್ಷದ ಪ್ರಾರಂಭ ದಿನವಾಯಿತು. ಇದನ್ನು ಫ್ರಾನ್ಸಿನ ಕೆಲವು ರೂಢಿವಾದಿಗಳು ವಿರೋದಿಸಿದರು. ಇವರನ್ನು ಸುಧಾರಣಾವಾದಿಗಳು ಮೂರ್ಖರೆಂದು ಜರಿದು ಏಪ್ರಿಲ್ 1ರಂದು ಮೂರ್ಖರ ದಿನವನ್ನು ಆಚರಿಸತೊಡಗಿದರು.

ಕ್ರಿ.ಶ.1550 ರಿಂದ 1574ವರಗೆ ಫ್ರಾನ್ಸ್‌ನ್ನು ಆಳಿದ 1ನೇ ಚಾರ್ಲ್ಸ್ ವರ್ಷಾರಂಭವನ್ನು ಏಪ್ರಿಲ್ 1ಕ್ಕೆ ಬದಲಾಗಿ ಜನವರಿ 1ರಿಂದ ಆಗಬೇಕೆಂದು ಆದೇಶ ಹೊರಡಿಸಿದ. ಏಪ್ರಿಲ್ 1ರಂದು ನಡೆಸುತ್ತಿದ್ದ ಪರಂಪರಾಗತ ರೀತಿ ರಿವಾಜುಗಳು ಜನವರಿ 1ರಂದು ನಡೆಯಬೇಕೆಂದು ಆದೇಶದಲ್ಲಿ ತಿಳಿಸಿದ. ಏಪ್ರಿಲ್ 1ರಂದು ಮುಗ್ದರನ್ನು ಹುಡುಕಿ ಏಪ್ರಿಲ್ ಮೀನು ಎಂದು ಕರೆದು ಗೇಲಿ ಮಾಡುವ ಈ ಚಟುವಟಿಕೆಯನ್ನು ಮೀನಿನ ಬೇಟೆ ಎಂದು ಕರೆಯಲಾಯಿತು. ಫ್ರಾನ್ಸ್ ದೇಶದಲ್ಲಿ ಏಪ್ರಿಲ್ ತಿಂಗಳಲ್ಲಿ ಮೀನುಗಳು ಮರಿಗಳಾಗಿದ್ದು ಸುಲಭವಾಗಿ ಬಲೆಗೆ ಸಿಕ್ಕಿ ಬೀಳುತ್ತವೆಯಂತೆ. ಹೀಗೆಯೇ ಮುಗ್ದರು ಸಲೀಸಾಗಿ ಕುಚೋದ್ಯಗಾರರ ಜಾಲಕ್ಕೆ ಸಿಕ್ಕಿ ಬೀಳುವುದರಿಂದ ಅವರನ್ನು ಹೀಗೆ ಏಪ್ರಿಲ್ ಮೀನು ಎಂದು ಕರೆದು ಗೇಲಿ ಮಾಡುತ್ತಿದ್ದರಂತೆ.

ಈ ಏಪ್ರಿಲ್ ಫೂಲ್‌ಗಳನ್ನು ಸ್ಕಾಟ್ಲೆಂಡಿನಲ್ಲಿ ಏಪ್ರಿಲ್ ಗೋಕ್ ಎಂದು ಫ್ರಾನ್ಸಿನಲ್ಲಿ ರಾಜರ್ ದಿ ಅಪಿರಲ್ ಎಂದು, ಜರ್ಮನಿಯಲ್ಲಿ ನಾರ್ ಎಂದು ಕರೆಯಲಾಗಿದೆ. ಸ್ಕಾಟ್ಲೆಂಡಿನಲ್ಲಿ ಕೋಗಿಲೆಗಳನ್ನು ದಡ್ಡ ಪಕ್ಷಿ ಎಂದು ತಿಳಿಯಲಾಗುತ್ತಿದ್ದು, ಏಪ್ರಿಲ್ 1ರಂದು ಹುಂಬರನ್ನು ತಮಾಷೆ ಮಾಡಲು ಎಲೈ ಕೋಗಿಲೆ, ಕೋಳಿಯ ಬಾಯಲ್ಲಿ ಹಲ್ಲು ತೋರಿಸು, ಚೌಕಾಕಾರದ ವೃತ್ತ ರಚಿಸು ಎಂದು ಚುಡಾಯಿಸುವರಂತೆ.

ಕ್ರಿ.ಶ.1781ರ ಮುಂಚಿನ ಕ್ಯಾಲೆಂಡರ್ ಪ್ರಕಾರ ಯುರೋಪಿನಲ್ಲಿ ಏಪ್ರಿಲ್ 1 ಸಂವತ್ಸರದ ಆರಂಭ ದಿನವಾಗಿ ಬಳಕೆಯಾಗುತ್ತಿತ್ತು. ನಂತರ 18ನೇ ಶತಮಾನದಲ್ಲಿ ಹೊಸ ಕ್ಯಾಲೆಂಡರ್ ರೂಪುಗೊಂಡು ಏಪ್ರಿಲ್ 1ರ ಬದಲು ಜನವರಿ 1 ಸಂವತ್ಸರದ ಆರಂಭದ ದಿನವಾಗಿ ಮಾರ್ಪಾಡಾಯಿತು. ಈ ಬದಲಾವಣೆಗೆ ಕೆಲವು ಸನಾತನೀಯರು, ಸಂಪ್ರದಾಯಸ್ಥರು, ಮೂಢರು, ವಿವೇಕ ಶೂನ್ಯರೆಂದು ಜರಿದು, ಅವರುಗಳನ್ನು ಫೂಲ್ಸ್‌ಗಳೆಂದು ಕರೆದು ಗೇಲಿ ಮಾಡುತ್ತಾ ಏಪ್ರಿಲ್ ಫೂಲಿಂಗ್ ಪ್ರಾರಂಭಿಸಿದರೆಂದು ಅದೇ ಏಪ್ರಿಲ್ ಫೂಲ್‌ನ ಹುಟ್ಟುವಿಕೆಗೆ ನಾಂದಿಯಾಗಿದೆ ಎಂದು ಒಂದು ಕಥೆ ಹೇಳುತ್ತದೆ.


ಕ್ರೈಸ್ತಮತದ ಕಥೆಯಂತೆ ನೋವಾ ಅನ್ನು ಆರ್ಕ್‌ನಿಂದ ಬಿಡುಗಡೆ ಮಾಡಿರುವುದು ಹಿಬ್ರೂ ಕ್ಯಾಲೆಂಡರ್ ಪ್ರಕಾರ ಏಪ್ರಿಲ್ 1ನೇ ತಾರೀಖಿನಂದೇ. ಈ ಸಂದರ್ಭದಲ್ಲಿ ಎಲ್ಲರೂ ಜೋಕ್ ಮಾಡುತ್ತಾ ಪರಿಹಾಸ್ಯದಿಂದ ಒಬ್ಬರಿಗೊಬ್ಬರು ಮೂರ್ಖರನ್ನಾಗಿ ಮಾಡಿಕೊಂಡು ಕಾಲ ಕಳೆದಂತೆ ಅದೇ ಏಪ್ರಿಲ್ ಫೂಲ್ಸ್ ಎಂದು ಮುಂದುವರಿದಿದೆ. ಪ್ರಪಂಚದ ಹಲವೆಡೆ ಮಾರ್ಚ್ 21, 22 ಹಗಲು ರಾತ್ರಿಗಳ ಪ್ರಮಾಣವು ಸಮನಾಗಿದ್ದು ಆಗಿನಿಂದ ಏಪ್ರಿಲ್ 1ರಂದು ಮೋಜು ಮಜಾದ ಉತ್ಸವವೊಂದನ್ನು ಆಚರಿಸಲಾಗುತ್ತಿತ್ತು. ಈ ಉತ್ಸವದಲ್ಲಿ ನಗುವ ನಗಿಸುವ ಕ್ರಿಯೆಗೆ ಪ್ರಧಾನ್ಯ. ಈ ಉತ್ಸವವೂ ಏಪ್ರಿಲ್ ಫೂಲ್‌ಗೆ ಪ್ರೇರಕವೆನ್ನಲಾಗಿದೆ. ಮೂರ್ಖರ ದಿನಾಚರಣೆಯು ಬ್ರಿಟಿಷ್‌ರೊಂದಿಗೆ ಭಾರತಕ್ಕೂ ಪಾದಾರ್ಪಣೆ ಮಾಡಿತು. ಭಾರತದಲ್ಲಿ ಹೋಳಿಹಬ್ಬಕ್ಕೆ ಆಚರಿಸುವ ರೀತಿ ರಿವಾಜುಗಳೇ ಏಪ್ರಿಲ್ ಫೂಲ್ ಎಂದು ಹೇಳುವುದುಂಟು. ಭಾರತದಲ್ಲಿ ಹಾಸ್ಯ ಸಂಘಗಳು ಏಪ್ರಿಲ್ ಫೂಲ್ ಡೇ ಮಾಡಿವೆ. ಈ ದಿನದಂದು ಹಾಸ್ಯ ಚಟಾಕಿ ಹಾರಿಸುವುದು ಹಾಸ್ಯ ಕವಿಗೋಷ್ಠಿ ಏರ್ಪಡಿಸುವುದು ಹಾಸ್ಯ ಪ್ರಹಸನ ಪ್ರದರ್ಶಿಸುವುದು ನಡೆದಿವೆ.

ತುಮಕೂರಿನ ದಿವಂಗತ ಗೌಡನಕಟ್ಟೆ ತಿಮ್ಮಯ್ಯನವರು ತಮ್ಮ ನಗೆಮಲ್ಲಿಗೆ ಸಂಸ್ಥೆಯಿಂದ ತುಮಕೂರು ಗುಬ್ಬಿವೀರಣ್ಣ ಕಲಾಮಂದಿರದಲ್ಲಿ ಹಾಸ್ಯಸಂಜೆ ಏರ್ಪಡಿಸುತ್ತಿದ್ದರು. ಬೆಳಿಗ್ಗೆ ನಗರದಲ್ಲಿ ಕತ್ತೆ ಮೆರವಣಿಗೆ ಮಾಡುತ್ತಿದ್ದರು. ನಾವು ಗೊರೂರು ಅನಂತರಾಜು, ಕೋ.ಲ.ರಂಗನಾಥರಾವ್ ಒಂದು ವರ್ಷ ತುಮಕೂರು ಕಾರ್ಯಕ್ರಮದಲ್ಲಿ ನಗಿಸಿದ್ದೆವು. ಇದೇ ಖುಷಿಯಲ್ಲಿ ಒಂದು ವರ್ಷ ಏಪ್ರಿಲ್ 1ಕ್ಕೆ ಹಾಸನದಲ್ಲಿ ಅಂದಿನ ಕಸಾಪ ಅಧ್ಯಕ್ಷರ ಸಹಕಾರ ಪಡೆದು ಹಾಸ್ಯಸಂಜೆ ಏರ್ಪಡಿಸಿ, ಅಲ್ಲಿ ಮ್ಯಾಜಿಕ್ ಶೋ ಮಾಡಿದ ಮಹಾಶಯರು ಟೊಪ್ಪಿಗೆ ಕರ್ಚಿಫ್ ಹಾಕಿ ಮತ್ತೇನೋ ತೆಗೆದು ನಗೆ ಹೋಗಿ ಹೊಗೆ ಆಗಿತ್ತು.

ನಾನು ಹೈಸ್ಕೂಲು ಓದುವಾಗ ನಮ್ಮ ಮನೆಯ ರಸ್ತೆಯಲ್ಲಿ ಹೋಗುವವರನ್ನು ಫೂಲ್ ಮಾಡಲೆಂದು ಒಂದು ಪೆನ್ನಿಗೆ ದಾರ ಕಟ್ಟಿ ರಸ್ತೆ ಮಧ್ಯೆ ಎಸೆದು ನಾನು ಮನೆಯ ಜಗುಲಿಯ ಗೋಡೆ ಮರೆಯಲ್ಲಿ ಅವಿತು ಕುಳಿತು, ದಾರಿಹೋಕರು ಎಲ್ಲೋ ಪೆನ್ನು ಬಿದ್ದಿದ್ದೆ ಎಂದು ಎತ್ತಿಕೊಳ್ಳಲು ಹೋದಾಗ ದಾರ ಎಳೆದು ಏಪ್ರಿಲ್ ಫೂಲ್.. ಎಂದು ಜೋರಾಗಿ ಕೂಗಿ ನಗುತ್ತಿದ್ದೆ. ಅವರು ಪೇಚು ಪೆಚ್ಚಾಗಿ ಪೆನ್ನು ಅಲ್ಲೇ ಬಿಟ್ಟು ಮುಂದೆ ಹೋಗುತ್ತಿದ್ದರು. ಆದರೆ ನಮ್ಮ ಹಾಲು ಮಾರುವ ಹೋರಿಗೌಡರು ಸಿಟ್ಟುಗೊಂಡು ಮಿಸ್ಟರ್ ಬರಕ್ಲೆ (ಅವರು ಹಾಗೆಂದು ನನಗೆ ಅಡ್ಡ ಹೆಸರು ಇಟ್ಟಿದ್ದರು. ನಾನು ಯಾವಾಗಲೋ ತುಂಬಾ ಚಿಕ್ಕವನಿದ್ದಾಗ ಚಿಕ್ಕಜ್ಜ ಶಂಕರಮೇಷ್ಟ್ರು ಅಂಗಡಿ ಮುಂದೆ ಬಿದ್ದಿದ್ದ ಬರಕ್ಲೆ ಸಿಗರೇಟ್ ತುಂಡನ್ನು ತೆಗೆದು ಸೇದಿದ್ದನೆಂದು ಅವರ ದೂರು. ಆದರೆ ನಿಜಕ್ಕೂ ನಾನು ಎಂದೂ ಸಿಗರೇಟ್ ಸೇದಿದವನಲ್ಲ. ನಾಟಕದಲ್ಲಿ ಮಾತ್ರ ಬೀಡಿ ಸೇದಲು ನರಸಿಂಹರಾಜು ಸ್ಟೈಲ್ ಅನುಕರಿಸುತ್ತಿದ್ದೆ. ಅವರ ಬೆಟ್ಟದ ಹುಲಿ ಚಿತ್ರದ ನಟನೆ ನನಗೆ ಪ್ರೇರಣೆ. ನಾನು ಹಾಸ್ಯ ಸಾಹಿತಿ ಕೋ.ಲ.ರಂಗನಾಥರಾವ್ ಶಾಲಾ ಕಾಲೇಜು, ರೋಟರಿ, ಲಯನ್ಸ್ ಮತ್ತು ಹಾಸ್ಯ ಸಂಘಗಳಲ್ಲಿ ಹಾಸ್ಯ ಕಾರ್ಯಕ್ರಮ ನಡೆಸಿಕೊಡುತ್ತಿದ್ದವು. ಒಂದು ದಿನ ಬೆಂಗಳೂರಿನ ಹಾಸ್ಯ ಸಂಘದ ಮಹನೀಯರು ಗೊರೂರಿಗೆ ಬಂದು ಬೆಂಗಳೂರಿನ ಎ.ಡಿ.ಎ. ರಂಗಮಂದಿರದಲ್ಲಿ ಹಾಸ್ಯ ಸಂಜೆ ಏರ್ಪಡಿಸುತ್ತಿರುವುದಾಗಿ ಹೇಳಿ ಆಹ್ವಾನಿಸಿ ಹೋದರು. ಆಹ್ವಾನ ಪತ್ರ ಕೂಡ ಕಳಿಸಿದ್ದರು. ಇಪ್ಪತ್ತು ಹಾಸ್ಯ ಸಾಹಿತಿಗಳ ಪಟ್ಟಿಯಲ್ಲಿ ನಮ್ಮ ಹೆಸರು ಇತ್ತು. ಕಾರ್ಯಕ್ರಮ ದಿನ ನಾವು ತಡವಾಗಿ ಹೋದೆವು. ಸಂಘಟಕರನ್ನು ಪರಿಚಯಿಸಿಕೊಳ್ಳಲಿಲ್ಲ. ಆಗಲೆ ಕಾರ್ಯಕ್ರಮ ನಡೆಯುತ್ತಿತ್ತು. ಪ್ರೇಕ್ಷಕರ ಸಾಲಿನಲ್ಲಿ ಹೋಗಿ ಕುಳಿತೆವು. ಹಾಸ್ಯ ಸಾಹಿತಿಗಳು ಏನೇನೋ ಜೋಕ್ ಹೇಳಿ, ವಕ್ರ ವಕ್ರವಾಗಿ ನಟಿಸಿ ನಗಿಸಲು ಸರ್ಕಸ್ ಮಾಡುತ್ತಿದ್ದರು. ಆದರೆ ನಮಗೆ ನಗು ಬರುತ್ತಿಲ್ಲ. ಏಕೆಂದರೆ ಅವರು ನಮ್ಮನ್ನು ವೇದಿಕೆಗೆ ಕರೆಯುತ್ತಿಲ್ಲ. ಕಾರ್ಯಕ್ರಮ ಮುಗಿಯುತ್ತಾ ಬಂದು ನಾವು ಮಂಕುದಿಣ್ಣೆಗಳು ಛೇ ಎಡವಟ್ ಆಯ್ತಲ್ಲಾ! ಎಂದು ಕೊಂಡು ತೆರೆ ಹಿಂದೆ ಹೋಗಿ ನಾವು ಬಂದಿರುವ ಸಂಗತಿ ತಿಳಿಸಿದೆವು. ಸಾರಿ ಎಂದ ನಿರೂಪಕರು ನಮ್ಮ ಹೆಸರು ಕರೆದರು. ನಾವು ವೇದಿಕೆಗೆ ಹೋದರೆ ಪ್ರೇಕ್ಷಕರು ಮನೆಗೆ ಹೋಗುತ್ತಿದ್ದರು. ಇಂತಹ ಕಾಲಕ್ಕೆ ನಮ್ಮ ಜೋಕ್ ಎಂತಪ್ಪ ರುಚಿಸುತ್ತದೆ! ಮೂರ್ಖರಾದೆವು ನಾವು ಶತಮೂರ್ಖರಾದೆವು. ಏನೇ ಆಗಲಿ ನಾವಿಬ್ಬರೂ ಜೊತೆಯಾಗಿ ಮೂರು ವರ್ಷಗಳಲ್ಲಿ ನೂರು ಹಾಸ್ಯ ಕಾರ್ಯಕ್ರಮ ನೀಡಿ ಶತಕ ಹೊಡೆದೆವು. ನಾನು ಹಾಸ್ಯ ಕಾರ್ಯಕ್ರಮದಲ್ಲಿ ಅಭಿನಯಿಸಿದ ಕಿರು ಜೋಕ್‌ಗಳನ್ನೇ ಹಾಸ್ಯ ಲೇಖನಗಳಾಗಿ ವಿಸ್ತರಿಸಿ ಸನ್ಮಾನ ಪ್ರಶಸ್ತಿ ಪರಂತು ಎಂಬ ಪುಸ್ತಕವನ್ನು 2017ರಲ್ಲಿ ಪ್ರಕಟಿಸಿದೆ. ಇಂದು ಕೋ.ಲ.ರಂ. ನಮ್ಮೊಂದಿಗೆ ಇಲ್ಲ ಆದರೆ ಆ ದಿನಗಳನ್ನು ಮರೆಯುವಂತಿಲ್ಲ.

ಏಪ್ರಿಲ್ ಫೂಲ್‌ಗೆ ಸಂಬಂಧಿಸಿದಂತೆ ಒಂದು ಜೋಕ್ ಹೀಗಿದೆ. ಒಂದು ಸಲ ಫ್ರೆಂಚ್ ವನಿತೆ ಏಪ್ರಿಲ್ 1ರಂದು ಮನೆಯೊಂದರಲ್ಲಿ ಒಡವೆಗಳನ್ನು ಕಳ್ಳತನ ಮಾಡಿದಳು. ಆಕೆಯನ್ನು ಬಂಧಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಿದಾಗ ಆಕೆ ಏಪ್ರಿಲ್ 1ಕ್ಕೆ ಮನೆಯವರನ್ನು ಫೂಲ್ ಮಾಡಲು ಕೇವಲ ತಮಾಷೆಗೋಸ್ಕರ ಈ ಕಳ್ಳತನ ಮಾಡಿದೆ ಅಷ್ಟೇ ಎಂದಳು ನಗುನಗುತ್ತಾ ಹೇಳಿಕೆ ನೀಡಿದಾಗ, ಹಾಸ್ಯಪ್ರಿಯರಾದ ನ್ಯಾಯಾಧೀಶರು ಕೂಡ ನಗುತ್ತಾ ತಮಾಷೆಗೋಸ್ಕರ ಮಾಡಿದ ಈ ಕಳ್ಳತನದ ಶಿಕ್ಷೆ ಏನೆಂದರೆ ಬರುವ ವರ್ಷ ಏಪ್ರಿಲ್ 1ರವರೆಗೆ ಜೈಲಿನಲ್ಲಿದ್ದು ತಮಾಷೆಯಾಗಿ ನಗುನಗುತ್ತಾ ಕಾಲ ಕಳಿ ಎಂದು ತೀರ್ಪು ನೀಡಿದರಂತೆ!

**- ಗೊರೂರು ಅನಂತರಾಜು, ಹಾಸನ.**
**ಮೊಬೈಲ್: 9449462879.**
ವಿಳಾಸ: ಹುಣಸಿನಕೆರೆ ಬಡಾವಣೆ, 29ನೇ ವಾರ್ಡ್, 3ನೇ ಕ್ರಾಸ್, ಶ್ರೀ ಶನೀಶ್ವರ ದೇವಸ್ಥಾನ ರಸ್ತೆ, ಹಾಸನ-573201.








# ತಲೆಹೊಟ್ಟು ಹೋಗಲಾಡಿಸಲು ಪಂಚಮಂತ್ರ!

ತಲೆಹೊಟ್ಟಿನಿಂದ ಕೇವಲ ತುರಿಕೆ ಮತ್ತು ಕಿರಿಕಿರಿ ಮಾತ್ರವಲ್ಲ, ಕೂದಲು ಉದುರುವಿಕೆಯೂ ಉಂಟಾಗಬಹುದು. ಮನೆಯಲ್ಲೇ ತಲೆಹೊಟ್ಟನ್ನು ಸಂಪೂರ್ಣವಾಗಿ ತೊಡೆದುಹಾಕಲು ಸಹಾಯ ಮಾಡುವ ಐದು ಸುಲಭ ಮನೆಮದ್ದುಗಳು ಯಾವುದು ಎನ್ನುವುದನ್ನು ನೋಡೋಣ. ಅದಕ್ಕೂ ಮೊದಲು ತಲೆಹೊಟ್ಟು ಬರಲು ಕಾರಣಗಳೇನು ಗೊತ್ತೇ?

**ತಲೆಹೊಟ್ಟಿಗೆ ಕಾರಣಗಳೇನು?:** ಇತ್ತೀಚಿನ ದಿನಗಳಲ್ಲಿ ಬಹುತೇಕ ಪ್ರತಿಯೊಬ್ಬರಿಗೂ ತಲೆಹೊಟ್ಟು ಒಂದು ಸಮಸ್ಯೆಯಾಗಿದೆ. ತಪ್ಪು ಜೀವನಶೈಲಿ, ಮಾಲಿನ್ಯ, ಒತ್ತಡ ಮಹ ರಾಸಾಯನಿಕಯುಕ್ತ ಉತ್ಪನ್ನಗಳಿಂದ ತಲೆಹೊಟ್ಟು ಉಂಟಾಗುತ್ತದೆ. ಇದರಿಂದ ತುರಿಕೆ ಮತ ಕಿರಿಕಿರಿ ಮಾತ್ರವಲ್ಲ, ಕೂದಲು ಉದುರುವಿಕೆಯೂ ಉಂಟಾಗಬಹುದು. ರಾಸಾಯನಿಕಗಳಿಲ್ಲದೆ ಮನೆಯಲ್ಲೇ ತಲೆಹೊಟ್ಟಿನ ಸಮಸ್ಯೆಯಿಂದ ಮುಕ್ತಿ ಪಡೆಯಲಾ ಬಯಸಿದರೆ, ಈ ನೈಸರ್ಗಿಕ ವಿಧಾನಗಳು ತುಂಬಾ ಪರಿಣಾಮಕಾರಿ.

**1. ತೆಂಗಿನೆಣ್ಣೆ ಮತ್ತು ನಿಂಬೆ ಬಳಕೆ:** ತೆಂಗಿನೆಣ್ಣೆ ನೆತ್ತಿಗೆ ಪೋಷಣೆ ನೀಡುತ್ತದೆ ಮತ್ತು ನಿಂಬೆಯ ಆ್ಯಂಟಿಬ್ಯಾಕ್ಟೀರಿಯಲ್ ಗುಣಗಳು ತಲೆಹೊಟ್ಟನ್ನು ಹೋಗಲಾಡಿಸಲು ಸಹಾಯ ಮಾಡುತ್ತವೆ. 2 ಚಮಚ ಉಗುರು ಬೆಚ್ಚಗಿನ ತೆಂಗಿನೆಣ್ಣೆಗೆ 1 ಚಮಚ ನಿಂಬೆರಸ ಸೇರಿಸಿ. ಇದನ್ನು ನೆತ್ತಿಗೆ ನಿಧಾನವಾಗಿ ಮಸಾಜ್ ಮಾಡಿ 30 ನಿಮಿಷಗಳ ನಂತರ ಸೌಮ್ಯವಾದ ಶಾಂಪೂವಿನಿಂದ ತೊಳೆಯಿರಿ. ವಾರಕ್ಕೆ ಎರಡು ಬಾರಿ ಹೀಗೆ ಮಾಡುವುದರಿಂದ ತಲೆಹೊಟ್ಟು ಕಡಿಮೆಯಾಗುತ್ತದೆ.

**2. ಅಲೋವೆರಾ ಜೆಲ್‌ನಿಂದ ನೆತ್ತಿಯ ಚಿಕಿತ್ಸೆ:** ಅಲೋವೆರಾದಲ್ಲಿ ಆ್ಯಂಟಿಫಂಗಲ್ ಮತ್ತು ತಂಪಾಗಿಸುವ ಗುಣಗಳಿದ್ದು, ಇದು ತುರಿಕೆ ಮತ್ತು ತಲೆಹೊಟ್ಟಿನಿಂದ ಪರಿಹಾರ ನೀಡುತ್ತದೆ. ತಾಜಾ ಅಲೋವೆರಾ ಜೆಲ್ ಅನ್ನು ನೇರವಾಗಿ ನೆತ್ತಿಗೆ ಹಚ್ಚಿ 40 ನಿಮಿಷ ಬಿಡಿ. ನಂತರ, ಸೌಮ್ಯವಾದ ಶಾಂಪೂವಿನಿಂದ ನಿಮ್ಮ ಕೂದಲನ್ನು ತೊಳೆಯಿರಿ. ಈ ವಿಧಾನವು ನೆತ್ತಿಯನ್ನು ಹೈಡ್ರೇಟ್ ಮಾಡುತ್ತದೆ ಮತ್ತು ಶುಷ್ಕತೆಯನ್ನು ನಿವಾರಿಸುತ್ತದೆ.

**3. ಮೊಸರು ಮತ್ತು ಮೆಂತ್ಯ ಹೇರ್ ಮಾಸ್ಕ್:** ಮೊಸರು ನೆತ್ತಿಯನ್ನು ತಂಪಾಗಿಸುತ್ತದೆ ಮತ್ತು ಮೆಂತ್ಯ ಬೀಜಗಳು ತಲೆಹೊಟ್ಟಿಗೆ ಕಾರಣವಾಗುವ ಫಂಗಸ್ ಅನ್ನು ನಾಶಮಾಡುತ್ತವೆ. ರಾತ್ರಿಯಿಡೀ ನೆನೆಸಿದ ಮೆಂತ್ಯವನ್ನು ರುಬ್ಬಿ 2 ಚಮಚ ಮೊಸರಿನೊಂದಿಗೆ ಮಿಶ್ರಣ ಮಾಡಿ. ಈ ಪೇಸ್ಟ್ ಅನ್ನು ನೆತ್ತಿ ಮತ್ತು ಕೂದಲಿನ ಬುಡಕ್ಕೆ ಹಚ್ಚಿ. 30-40 ನಿಮಿಷಗಳ ನಂತರ ನಿಮ್ಮ ಕೂದಲನ್ನು ತೊಳೆಯಿರಿ. ಈ ಮಾಸ್ಕ್ ತಲೆಹೊಟ್ಟನ್ನು ನಿವಾರಿಸುವುದಲ್ಲದೆ, ಕೂದಲನ್ನು ಮೃದು ಮತ್ತು ಬಲವಾಗಿಸುತ್ತದೆ.

**4. ಆ್ಯಪಲ್ ಸೈಡರ್ ವಿನೆಗರ್:** ಆ್ಯಪಲ್ ಸೈಡರ್ ವಿನೆಗರ್ ನೆತ್ತಿಯ ಪಿಹೆಚ್ ಸಮತೋಲನಗೊಳಿಸುತ್ತದೆ. ಇದು ತಲೆಹೊಟ್ಟನ್ನು ಕಡಿಮೆ ಮಾಡುತ್ತದೆ. 2 ಚಮಚ ಆ್ಯಪಲ್ ಸೈಡರ್ ವಿನೆಗರ್ ಅನ್ನು 1 ಕಪ್ ನೀರಿನಲ್ಲಿ ಬೆರೆಸಿ ಶಾಂಪೂ ಮಾಡಿದ ನಂತರ ಕೊನೆಯಲ್ಲಿ ತೊಳೆಯಲು ಬಳಸಿ. ಇದನ್ನು ಮತ್ತೆ ತೊಳೆಯುವ ಅಗತ್ಯವಿಲ್ಲ. ಈ ವಿಧಾನವು ನೆತ್ತಿಯನ್ನು ಸ್ವಚ್ಛವಾಗಿಡುತ್ತದೆ ಮತ್ತು ಬ್ಯಾಕ್ಟೀರಿಯಾವನ್ನು ತಡೆಯುತ್ತದೆ.

**5. ಬೇವಿನ ಎಲೆಗಳ ಕಷಾಯ:** ಬೇವಿನ ಎಲೆಗಳಲ್ಲಿ ಆ್ಯಂಟಿಬ್ಯಾಕ್ಟೀರಿಯಲ್ ಮತ್ತು ಆ್ಯಂಟಿಫಂಗಲ್ ಗುಣಗಳು ಸಮೃದ್ಧವಾಗಿವೆ. ಒಂದು ಹಿಡಿ ಬೇವಿನ ಎಲೆಗಳನ್ನು ನೀರಿನಲ್ಲಿ ಕುದಿಸಿ ತಣ್ಣಗಾಗಲು ಬಿಡಿ. ಈ ನೀರಿನಿಂದ ನಿಮ್ಮ ಕೂದಲನ್ನು ತೊಳೆಯಿರಿ ಅಥವಾ ನೆತ್ತಿಗೆ ಹಚ್ಚಿ, ವಾರಕ್ಕೆ 1-2 ಬಾರಿ ಬಳಸುವುದರಿಂದ ತುರಿಕೆ, ಸೋಂಕು ಮತ್ತು ತಲೆಹೊಟ್ಟಿನಿಂದ ಪರಿಹಾರ ಸಿಗುತ್ತದೆ. ಇದು ತೀವ್ರ ತಲೆಹೊಟ್ಟಿಗೆ ತುಂಬಾ ಪರಿಣಾಮಕಾರಿ.

---

## ಸಾವು

ಮನೆಯ ಮುಂದೆ ಇನ್ನೂ ಹೊಗೆ ಇಳಿಯಲೇ ಇಲ್ಲ. ಅಪ್ಪನ ಚಿತೆಯ ಬೂದಿ ಇನ್ನೂ ತಂಪಾಗಿರಲಿಲ್ಲ. ಆದರೆ ಮನೆಯೊಳಗೆ ಮಾತುಗಳ ಬಿಸಿ ಹೆಚ್ಚಾಗುತ್ತಲೇ ಇತ್ತು.

ಈ ಹಳೆಯ ವಸ್ತುಗಳೆಲ್ಲಾ ಬೇಡ... ಅಶುದ್ಧ, ಎಂದು ಗಂಟು ಕಟ್ಟಿ ಅಟ್ಟಕ್ಕೆ ಎಸೆದರು. ಅಪ್ಪನ ಕೋಲು... ಅವನ ಕೈ ಹಿಡಿದಂತೆ ನಿಂತಿದ್ದ ಆ ಕೋಲು, ಈಗ ನಿರ್ಲಕ್ಷ್ಯದಿಂದ ಮೂಲೆ ಸೇರಿತ್ತು. ಕನ್ನಡಕವನ್ನೂ ಸುಟ್ಟು ಹಾಕಿದರು. ಇವು ಇಟ್ಟುಕೊಂಡರೆ ಮನೆಗೆ ಶುದ್ಧ ಇರೋದಿಲ್ಲ ಅಂತ. ಆದರೆ ಅದೇ ಮನೆಯವರು, ಅಪ್ಪನ ಆಸ್ತಿ ಮಾತು ಬಂದಾಗ, ಒಂದೊಬ್ಬರು ಮುಂದೆ ಬಂದು ಹಕ್ಕು ಸ್ಥಾಪಿಸಿದರು. ಮೂಲೆಯಲ್ಲಿ ಕುಳಿತಿದ್ದ ಮಗನಿಗೆ ಅರ್ಥವಾಗಲಿಲ್ಲ. ಅಪ್ಪನನ್ನು ನೆನಪಿಸೋ ವಸ್ತುಗಳು ಅಶುದ್ಧವಾ? ಅವನನ್ನು ಮರೆತು ಬಿಡೋದು ಶುದ್ಧವಾ? ಅವನ ಕಣ್ಣಿಗೆ ಅಪ್ಪನ ನೆನಪುಗಳು ಬಂತು. ಆ ಕೋಲಿನಿಂದ ನಡೆಯುತ್ತಿದ್ದ ಅಪ್ಪ, ಆ ಕನ್ನಡಕದ ಹಿಂದೆ ಮೃದುವಾಗಿ ನಗುತ್ತಿದ್ದ ಕಣ್ಣುಗಳು... ಅವನ್ನೆಲ್ಲಾ ಸುಟ್ಟರು. ಆದರೆ ಅವರ ಸ್ವಾರ್ಥವನ್ನು ಯಾರೂ ಸುಡಲಿಲ್ಲ. ಮನೆಯೊಳಗೆ ಬೂದಿ ಇಲ್ಲ...ಆದರೆ ಮನಸ್ಸಿನೊಳಗೆ ತುಂಬಾ ಬೂದಿ ಬಿದ್ದಿತ್ತು. ಅಪ್ಪನ ಚಿತೆ ಹೊರಗೆ ಉರಿದು ಮುಗಿಯಿತು... ಆದರೆ ಅವನ ಮೌಲ್ಯಗಳ ಚಿತೆ, ಮನೆಯೊಳಗೆ ಇನ್ನೂ ಉರಿಯುತ್ತಲೇ ಇತ್ತು.

**- ಧೀರಜ್** ಬೆಳ್ಳಾರೆ



# ಸರ್ಕಾರಿ ವೈದ್ಯರ ಖಾಸಗಿ ಸೇವೆಗೆ ಆಕ್ರೋಶ

## ರೋಗಿಗಳಿಗೆ ತೊಂದರೆ | ಕೆ.ಡಿ.ಪಿ. ಸಭೆಯಲ್ಲಿ ತಾ.ಪಂ. ಸದಸ್ಯರಿಂದ ಗಂಭೀರ ಆರೋಪ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದ ಸರ್ಕಾರಿ ಆಸ್ಪತ್ರೆಯ ವೈದ್ಯರು ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿದೆ ಎಂದು ಕೆಡಿಪಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ ಘಟನೆ ಮಂಗಳವಾರ ನಡೆಯಿತು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಸದಸ್ಯರಾದ ಗುರುಪ್ರಸಾದ್, ಕಬ್ಬಾಳು ಮಹೇಶ್, ಮಧುಸೂದನ್ ಅವರು ಮಾತನಾಡಿ, ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷದಿಂದ ರೋಗಿಗಳು ಕಂಗಾಲಾಗಿದ್ದು ವೈದ್ಯರು ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡಿ ಎಂದು ಹೇಳಿದರೆ, ಖಾಸಗಿ ಆಸ್ಪತ್ರೆಯಲ್ಲಿ ಸುಲಿಗೆ ಮಾಡುತ್ತಿದ್ದಾರೆ ಎಂದು ವೈದ್ಯರ ವಿರುದ್ಧ ಕಿಡಿಕಾರಿದರಲ್ಲದೆ, ಅವರುಗಳ ಮೇಲೆ ಸೂಕ್ತ ಕ್ರಮ ಜರುಗಿಸಬೇಕೆಂದ ಆಗ್ರಹಿಸಿದರು.

ರೋಗಿಗಳು ಸರ್ಕಾರಿ ಆಸ್ಪತ್ರೆಗೆ ಬಂದರೆ ಚಿಕಿತ್ಸೆ ನೀಡದೆ ಖಾಸಗಿ ಆಸ್ಪತ್ರೆಗೆ ಕಳುಹಿಸುವ ನರ್ಸ್‌ಗಳ ದಂದೆ ಹೆಚ್ಚಾಗಿದೆ, ಈ ಬಗ್ಗೆ ಸಾಕಷ್ಟು ದೂರು ನೀಡಿದರೂ ಸಹ ತಾಲ್ಲೂಕು ವೈದ್ಯಾಧಿಕಾರಿಗಳು ಕ್ರಮ ವಹಿಸುತ್ತಿಲ್ಲ, ರೋಗಿಗಳಿಗೆ ಚಿಕಿತ್ಸೆ ನೀಡಲು ಆಗದೇ ಇದ್ದರೆ ಕೆಲಸದಿಂದ ಹೊರ ಹೋಗಲಿ, ಅದನ್ನು ಬಿಟ್ಟು ರೋಗಿಗಳಿಗೆ ತೊಂದರೆ ನೀಡುವುದು ಸರಿಯಲ್ಲ ಎಂದು ಆರೋಪಿಸಿದರು.

ಇದಕ್ಕೆ ಉತ್ತರಿಸಿದ ತಾಲೂಕು ವೈದ್ಯಾಧಿಕಾರಿ ಯುವರಾಜ್ ಅವರು, ಸರ್ಕಾರದ ಆದೇಶದಂತೆ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಿದ ನಂತರ ಖಾಸಗಿ ಆಸ್ಪತ್ರೆಯಲ್ಲಿ ವೈದ್ಯರು ಕೆಲಸ ಮಾಡಬಹುದೆಂದು




ಆದೇಶವಿದೆ, ಅದನ್ನ ಹೊರತುಪಡಿಸಿ ಉಲ್ಲಂಘನೆ ಮಾಡಿದ್ದರೆ ನಮಗೆ ದೂರು ನೀಡಿ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ನಂತರ ಕೆಡಿಪಿ ಸದಸ್ಯರುಗಳು ರಾಗಿ ಖರೀದಿ ಕೇಂದ್ರದಲ್ಲಿ ಸಾಕಷ್ಟು ಅವ್ಯವಹಾರವಾಗಿದ್ದು, ಮೂಲ ರೈತರಿಗೆ ರಾಗಿ ಬೆಂಬಲ ಬೆಲೆ ಸಿಗದೇ ದಲ್ಲಾಳಿಗಳು ದಾವಣಗೆರೆ, ಚಿತ್ರದುರ್ಗ, ಹುಳಿಯಾರ್ ಕಡೆಯಿಂದ ರಾಗಿಗಳನ್ನು ತಂದು ಇದರಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಶಾಮೀಲು ಎದ್ದು ಕಾಣುತ್ತಿದೆ. ಈ ಬಗ್ಗೆ ಸಾಕಷ್ಟು ಬಾರಿ ತಿಳಿಸಿದರೂ ಕ್ರಮ ವಹಿಸಿಲ್ಲ. ಇದರ ಸಂಬಂಧಪಟ್ಟ ಅಧಿಕಾರಿಗಳು ಸಹ ಸಭೆಗೆ ಬಾರದೇ ಬೇಜವಾಬ್ದಾರಿ ವರ್ತನೆ ತೋರಿದ್ದಾರೆ. ತಾಲ್ಲೂಕಿನಲ್ಲಿ ರಾಗಿ ಬೆಳೆಯುವ ಪ್ರದೇಶಕ್ಕಿಂತ ಹೆಚ್ಚಿನ ರಾಗಿಯನ್ನು ಖರೀದಿ ಕೇಂದ್ರಕ್ಕೆ ನೀಡಿರುವುದು ಯಾವ ಮಾನದಂಡದ ಮೇಲೆ ಪರಿಗಣಿಸಲಾಗಿದೆ ಎಂಬುದನ್ನ ತಿಳಿಸಬೇಕು. ತಾಲ್ಲೂಕಿನಲ್ಲಿ ಹೇಳುವವರು - ಕೇಳುವವರು ಯಾರು ಇಲ್ಲದಂತಾಗಿದೆ, ಅಧಿಕಾರಿಗಳಿಗೆ ಯಾವುದೇ ಭಯವಿಲ್ಲದಂತೆ ಕೆಲಸ ಮಾಡುತ್ತಿದ್ದು ಸಾಕಷ್ಟು ಬಾರಿ ಎಚ್ಚರಿಕೆ ನೀಡಿದರೂ ಸಹ ಬೇಜವಾಬ್ದಾರಿ ವರ್ತನೆ ತೋರುತ್ತಿದ್ದಾರೆ ಎಂದು ಸದಸ್ಯರು ಆರೋಪಿಸಿದರು.

ಸಭೆಯಲ್ಲಿ ಶಾಸಕ ಸಿ.ಎನ್. ಬಾಲಕೃಷ್ಣ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಹರೀಶ್, ಡಿವೈಎಸ್‌ಪಿ ಕುಮಾರ್, ಶಿರಸ್ತೆದಾರ್ ಪವನ್‌ಕುಮಾರ್, ಸದಸ್ಯರು, ಸಿಬ್ಬಂದಿ ವರ್ಗ ಸೇರಿದಂತೆ ಮತ್ತಿತರಿದ್ದರು.

# ರಾಜ್ಯದಲ್ಲಿ ಮುಂದಿನ 4 ದಿನ ಅಬ್ಬರಿಸಲಿದೆ ಮಳೆ

• ಪ್ರಜೋದಯ ವರದಿ



**ಬೆಂಗಳೂರು:** ಬೇಸಿಗೆಯ ಬಿರು ಬಿಸಿಲಿನ ನಡುವೆಯೂ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆ ಅಬ್ಬರಿಸುತ್ತಿದ್ದು, ಮುಂದಿನ 4 ದಿನ ಗುಡುಗು ಸಹಿತ ಮಳೆಯ ಆರ್ಭಟ ಮುಂದುವರಿಯುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಹಲವು ಜಿಲ್ಲೆಗಳಿಗೆ ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಿಸಿದೆ.

**ಇಂದು 14 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್:** ಏ.1ರಂದು 14 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಹೀಗಾಗಿ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಯಲ್ಲಿ ಬುಧವಾರ ಸಾಧಾರಣ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ.

ಇನ್ನು ಮುಂದಿನ 5 ದಿನಗಳವರೆಗೆ ರಾಜ್ಯದಾದ್ಯಂತ ಗರಿಷ್ಠ ಮತ್ತು ಕನಿಷ್ಠ ತಾಪಮಾನದಲ್ಲಿ ದೊಡ್ಡ ಬದಲಾವಣೆ ಇರುವುದಿಲ್ಲ. ಬೆಂಗಳೂರಿನಲ್ಲಿ ಮುಂದಿನ 48 ಗಂಟೆಗಳವರೆಗೆ ಭಾಗಶಃ ಮೋಡ ಕವಿದ ವಾತಾವರಣ. ಸಂಜೆ / ರಾತ್ರಿಯ ವೇಳೆಗೆ ಕೆಲವು ಪ್ರದೇಶಗಳಲ್ಲಿ, ಹಗುರದಿಂದ ಮಧ್ಯಮ ಮಳೆ/ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನ ಕ್ರಮವಾಗಿ 34 ಮತ್ತು 22 ಇರುವ ಸಾಧ್ಯತೆ ಇದೆ.

**ಏಪ್ರಿಲ್ 4ರವರೆಗೆ ಹಲವು ಜಿಲ್ಲೆಗಳಲ್ಲಿ ಮಳೆ ಆರ್ಭಟ!**

ಏಪ್ರಿಲ್ 2ರಂದು ಬೀದರ್, ಕಲಬುರಗಿ, ಬೆಳಗಾವಿ,ಧಾರವಾಡ, ಗದಗ, ಉತ್ತರ ಕನ್ನಡ, ಹಾವೇರಿ, ದಾವಣಗೆರೆ, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಸೇರಿ 12 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಿದ್ದು, ಸಾಧಾರಣ ಮಳೆ ಅಥವಾ ಗುಡುಗು ಸಹಿತ ಮಳೆ ಆರ್ಭಟಿಸುವ ಮುನ್ಸೂಚನೆ ಇದೆ.

ಇನ್ನು ಏಪ್ರಿಲ್ 3ರಂದು ಕೂಡ ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ, ಕೊಪ್ಪಳ, ಹಾವೇರಿ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಸೇರಿ 12 ಜಿಲ್ಲೆಗಳಿಗೆ ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ನೀಡಿದ್ದು, ಗುಡುಗು ಸಹಿತ ಮಳೆಯಾಗಲಿದೆ.

ಏ.4ರಂದು ಬೀದರ್, ರಾಯಚೂರು, ಕಲಬುರಗಿ, ಯಾದ ಗಿರಿ, ಕೊಪ್ಪಳ, ಬಳ್ಳಾರಿ, ವಿಜಯ ನಗರ, ದಾವಣಗೆರೆ, ಚಿತ್ರದುರ್ಗ, ತುಮಕೂರು, ದಕ್ಷಿಣ ಕನ್ನಡ ಸೇರಿ 11 ಜಿಲ್ಲೆಗಳಲ್ಲಿ ಮಳೆ ಅಬ್ಬರಿಸುವ ಸಾಧ್ಯತೆ ಇದೆ.

## ಮಂಗಳವಾರದ ಕಾಫಿ ಧಾರಣೆ (50 ಕೆಜಿಗೆ)

| | |
|---|---|
| ಅರೇಬಿಕಾ ಪಾರ್ಚ್‌ಮೆಂಟ್: | 22,500 |
| ಅರೇಬಿಕಾ ಚೆರಿ : | 11,500 |
| ರೊಬಸ್ಟಾ ಪಾರ್ಚ್‌ಮೆಂಟ್: | 17,000 |
| ರೊಬಸ್ಟಾ ಚೆರಿ : | 8,700 |



ಹಾಸನ: ತಾಲ್ಲೂಕಿನ ಕಟ್ಟಾಯ ಹೋಬಳಿ ಬ್ಯಾಡರಹಳ್ಳಿ ಗ್ರಾಮದಲ್ಲಿ ಜೂನ್ 18ರಂದು ಹಮ್ಮಿಕೊಂಡಿರುವ ಗ್ರಾಮ ದೇವತೆ ದೇವಸ್ಥಾನ ಕಳಸರೋಹಣ ಮತ್ತು ಧಾರ್ಮಿಕ ಸಮಾರಂಭಕ್ಕೆ ಆಗಮಿಸುವಂತೆ ಮಂಗಳವಾರ ತುಮಕೂರಿನ ಸಿದ್ದಗಂಗಾ ಮಠದ ಮಠಾಧೀಶ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರಿಗೆ ಆಹ್ವಾನ ನೀಡಲಾಯಿತು. ತಣ್ಣೀರುಹಳ್ಳ ಮಠದ ಮಠಾಧೀಶ ವಿಜಯಕುಮಾರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಮಧು ಇತರರಿದ್ದರು.

# ಪೋಷಕರು ಮಕ್ಕಳೊಂದಿಗೆ ಗುಣಾತ್ಮಕ ಸಮಯ ಕಳೆಯಬೇಕು

## ಮೊಬೈಲ್ ಕೊಡುವ ಅಭ್ಯಾಸ ನಿಲ್ಲಿಸಿ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿ: ಹಿಮ್ಸ್‌ನ ಡಾ.ರವಿಕುಮಾರ್ ಸಲಹೆ

• ಪ್ರಜೋದಯ ವರದಿ

**ಹಾಸನ:** ಎಳೆಯ ವಯಸ್ಸಿನಲ್ಲಿ ಮಕ್ಕಳನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಅವರ ಜೊತೆ ಗುಣಾತ್ಮಕ ಸಮಯವನ್ನು ಕಳೆಯಬೇಕು. ಮಕ್ಕಳನ್ನು ಪಾಠದ ಜೊತೆಗೆ ಆಟೋಟಗಳಲ್ಲಿ ತೊಡಗಿಸಿ ಅವರ ಮನೋದೈಹಿಕ ಬೆಳವಣಿಗೆಗೆ ಸಹಾಯವಾಗುವಂತೆ ನೋಡಿಕೊಳ್ಳಬೇಕು. ಮಕ್ಕಳ ಕೈಗೆ ಮೊಬೈಲ್ ಕೊಡುವ ಅಭ್ಯಾಸ ಮಾಡುವುದನ್ನು ನಿಲ್ಲಿಸಿ ಅವರನ್ನು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಬೇಕು ಎಂದು ಹಿಮ್ಸ್‌ನ ಡಾ|| ರವಿಕುಮಾರ್ ಕಿವಿಮಾತು ಹೇಳಿದರು.



ನಗರದ ಎಸ್.ಆರ್.ಎಸ್. ಪ್ರಜ್ಞಾ ವಿದ್ಯಾಶಾಲೆಯಲ್ಲಿ ಪೂರ್ವ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಯು.ಕೆ.ಜಿ. ತರಗತಿಯನ್ನು ಮುಗಿಸಿದ ಪುಟಾಣಿ ಮಕ್ಕಳಿಗೆ ಪದವಿ ಪ್ರಧಾನ ಸಮಾರಂಭ ಎಂಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಕ್ಕಳಿಗೆ ಪದವಿ ಪ್ರಧಾನ ಮಾಡಿ ಮಾತನಾಡಿದ ಅವರು, ಮಕ್ಕಳನ್ನು ಅತೀ ಜಾಗರೂಕತೆಯಿಂದ ಸುರಕ್ಷಿತವಾಗಿ ನೋಡಿಕೊಳ್ಳುತ್ತಾ ಗುಣಮಟ್ಟದ ಶಿಕ್ಷಣ ಕೊಡಿಸುವ ಮೂಲಕ ಅವರ ಸುಂದರ ಭವಿಷ್ಯಕ್ಕೆ ಅಡಿಪಾಯ ಹಾಕಬೇಕು ಎಂದರು.

ಪುಟಾಣಿ ಮಕ್ಕಳು ಅನುಕರಣೆಯ ಮೂಲಕ ಹೆಚ್ಚು ಕಲಿಯುವುದರಿಂದ ಮನೆಯಲ್ಲಿ ಪೋಷಕರು ನಡೆ-ನುಡಿಯಲ್ಲಿ ಮಾದರಿಯಾಗಿ ನಡೆದುಕೊಂಡು ಮಕ್ಕಳು ಹಾಗೆ ಪಾಲಿಸುವಂತೆ ನೋಡಿಕೊಳ್ಳಬೇಕು. ಮಕ್ಕಳಲ್ಲಿ ಉತ್ತಮ ಸಂಸ್ಕಾರ, ಉದಾತ್ತ ಗುಣಗಳು, ಸನ್ನಡತೆ, ಉತ್ತಮ ಮೌಲ್ಯಗಳು ಹಾಗೂ ಗುರು-ಹಿರಿಯರ ಬಗ್ಗೆ ಗೌರವಗಳನ್ನು ಎಳೆಯ ವಯಸ್ಸಿನಿಂದಲೇ ಕಲಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಪದವಿ ಪಡೆದ ಎಲ್ಲಾ ಪುಟಾಣಿ ಮಕ್ಕಳಿಗೂ ಶುಭಾಷಯಗಳನ್ನು ತಿಳಿಸಿದರು.

ಸಂಸ್ಥೆಯ ಅಧ್ಯಕ್ಷ ಆರ್.ರಾಜಗೋಪಾಲಶೆಟ್ಟಿ ಅವರು ಮಾತನಾಡಿ, ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಮಹತ್ತರವಾದುದ್ದಾಗಿದ್ದು, ಮನೆಯಲ್ಲಿ ಸೌಹಾರ್ದಯುತವಾದ ವಾತಾವರಣವಿರುವಂತೆ ನೋಡಿಕೊಂಡು ಮನೆಯ ಸದಸ್ಯರು ಅನ್ಯೋನ್ಯವಾಗಿರಬೇಕು. ಮಕ್ಕಳಿಗಾಗಿ ಪ್ರತಿದಿನ ಒಂದಷ್ಟು ಸಮಯವನ್ನು ಮೀಸಲಿರಿಸಿ ಅವರ ಅನಿಸಿಕೆಗಳು, ಭಾವನೆಗಳನ್ನು ಅರ್ಥೈಸಿಕೊಂಡು ಅವರನ್ನು ಪ್ರತಿ ಹಂತದಲ್ಲಿ ಪ್ರತಿ ವಿಷಯದಲ್ಲಿ ಮಾರ್ಗದರ್ಶನ ನೀಡಿ ಮುಂದೆ ಸಮಾಜದ ಆಸ್ತಿಯಾನ್ನಾಗಿ ಮಾಡಬೇಕು ಎಂದು ಪೋಷಕರಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಎಂ.ನಟರಾಜ್, ಸಂಸ್ಥೆಯ ಟ್ರಸ್ಟಿ ಆಶಾ ನಟರಾಜ್, ಪುಟಾಣಿ ಪದವೀಧರರು, ಶಿಕ್ಷಕರು ಹಾಗೂ ಪೋಷಕರು ಹಾಜರಿದ್ದರು.



ಸಕಲೇಶಪುರ ತಾಲ್ಲೂಕು ಬೆಳಗೋಡು ಹೋಬಳಿ ರಾಜೇಂದ್ರಪುರದ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ ಸೋಮವಾರ ವಿಜೃಂಭಣೆಯಿಂದ ಜರುಗಿತು. ಶಾಸಕ ಸಿಮೆಂಟ್ ಮಂಜು ಮತ್ತಿತರರು ಭಾಗವಹಿಸಿ ದೇವರ ದರ್ಶನ ಪಡೆದು ಕೃತಾರ್ಥರಾದರು.

# ಗುರು-ಶಿಷ್ಯರ ಸಂಬಂಧ ಎಂದಿಗೂ ಮುಗಿಯದ ಅನುಬಂಧ


• ಪ್ರಜೋದಯ ವರದಿ

**ಹಳೇಬೀಡು:** ಗುರು-ಶಿಷ್ಯರ ಸಂಬಂಧ ಎಂದೆಂದಿಗೂ ಮುಗಿಯದ ಅನುಬಂಧವಾಗಿದ್ದು, ನಾಗರಾಜು ಮೇಸ್ಟ್ರು ಎಸ್.ಡಿ.ಎಂ.ಸಿ, ಪೋಷಕರು ಹಾಗೂ ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶಾಲೆಯ ಚಟುವಟಿಕೆ ನಡೆಸುತ್ತಿದ್ದರು ಎಂದು ಅಡಗೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ ಮಾಜಿ ಅಧ್ಯಕ್ಷ ಎ.ಎ.ಚಂದ್ರಪ್ರಭ ತಿಳಿಸಿದರು.

ವಯೋ ನಿವೃತ್ತರಾದ ದೈಹಿಕ ಶಿಕ್ಷಣ ಶಿಕ್ಷಕ ಎಚ್.ಆರ್.ನಾಗರಾಜ್ ಅವರಿಗೆ ಮಂಗಳವಾರ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಶಿಷ್ಯರು ಹಾಗೂ ಅಭಿಮಾನಿಗಳಿಂದ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳಲ್ಲಿ ಕ್ರೀಡಾಸಕ್ತಿ ಬೆಳೆಸಿದ್ದರಿಂದ ಅಡಗೂರು ಮಕ್ಕಳು ರಾಷ್ಟ್ರಮಟ್ಟದ ಕ್ರೀಡೆಯಲ್ಲಿ ಭಾಗವಹಿಸಿ ಶಾಲೆ ಹಾಗೂ ಗ್ರಾಮಕ್ಕೆ ಹೆಸರು ತಂದಿದ್ದಾರೆ. ಗಿಡ ನೆಡುವುದರಿಂದ ಆಗುವ ಪ್ರಯೋಜನವನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಪರಿಸರ ಕಾಳಜಿಯ ಮೂಡಿಸಿದ್ದಾರೆ ಎಂದರು.

ಅಡಗೂರು ಹಾಗೂ ಹಳೇಬೀಡಿನ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಗಳಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ನಾಗರಾಜ್ ಅವರಿಗೆ ಅಭಿನಂಧನೆಯ ಹೊಳೆ ಹರಿದು ಬಂತು. ಕ್ರೀಡಾ ಸಾಧಕ ಶಿಷ್ಯರು, ಅಭಿಮಾನಿಗಳು, ಸ್ನೇಹಿತರು, ಸಹೋದ್ಯೋಗಿಗಳು ಬಿಡುವಿಲ್ಲದಂತೆ ನಾಗರಾಜು ಹಾಗೂ ಅವರ ಪತ್ನಿ ಅಂಬಿಕಾ ಅವರನ್ನು ಸನ್ಮಾನಿಸಿದರು.

ನಾಗರಾಜು ಅವರ ಆಸಕ್ತಿಯಿಂದ ಅಡಗೂರು ಶಾಲೆಯಲ್ಲಿ ಶತಮಾನೋತ್ಸವ ನಡೆಯಿತು. ಅಡಗೂರು ಹಾಗೂ ಹಳೇಬೀಡು ಶಾಲೆಯ ಮಕ್ಕಳಲ್ಲಿ ಕ್ರೀಡಾಸಾಕ್ತಿ ಬೆಳೆಸಿದರು.



ಹೀಗಾಗಿ ಎರಡೂ ಶಾಲೆಯಲ್ಲಿಯ ಸಾಕಷ್ಟು ವಿದ್ಯಾರ್ಥಿಗಳು ರಾಷ್ಟ್ರ ಮಟ್ಟದ ಕ್ರೀಡಾ ಸಾಧಕರಾಗಿ ಹೊರಹೊಮ್ಮಿದರು. ದೈಹಿಕ ಶಿಕ್ಷಣ ಮಾತ್ರವಲ್ಲದೆ ಯೋಗದ ಮಹತ್ವವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದ್ದರಿಂದ ಶಿಕ್ಷಣ ಮುಗಿಸಿದ ಸಾಕಷ್ಟು ವಿದ್ಯಾರ್ಥಿಗಳು ಯೋಗ ಕರಗತ ಮಾಡಿಕೊಂಡು ಆರೋಗ್ಯವಂತರಾಗಿದ್ದಾರೆ. ಹೀಗಾಗಿ ಅಡಗೂರು ಹಾಗೂ ಹಳೇಬೀಡು ಭಾಗದ ವಿವಿಧ ಊರಿನ ಹಳೇಯ ವಿದ್ಯಾರ್ಥಿಗಳು ಗುರುವಂದನೆ ಕಾರ್ಯ ಕ್ರಮದಲ್ಲಿ ಭಾಗವಹಿಸಿದ್ದರು.

ಎಚ್.ಆರ್.ನಾಗರಾಜು ಮಾತನಾಡಿ, ಶಿಷ್ಯರು, ಪೋಷಕರು, ಹಾಗೂ ಕೆಲಸ ಮಾಡಿದ ಗ್ರಾಮದ ಜನತೆ ತೋರಿಸಿದ ಅಭಿಮಾನ ಕಂಡಾಗ ಮನಸ್ಸು ಪ್ರಫುಲ್ಲವಾಯಿತು. ಶಿಕ್ಷಕ ವೃತ್ತಿ ಸಾರ್ಥಕ ಎನಿಸಿತು ಎಂದರು.

ನಿವೃತ್ತ ಶಿಕ್ಷಣಾಧಿಕಾರಿ ಮುಳ್ಳಯ್ಯ ಮಾತನಾಡಿ, ಕೆಪಿಎಸ್ ಶಾಲೆಯಲ್ಲಿ ನಾನು ಉಪ ಪ್ರಾಂಶುಪಾಲನಾಗಿದ್ದಾಗ ಪ್ರಾಥಮಿಕ. ವಿಭಾಗದ ದೈಹಿಕ ಶಿಕ್ಷಣ ಶಿಕ್ಷಕ ನಾಗರಾಜು ಎಲ್ಲಾ ಕೆಲಸಗಳಿಗೂ ಕೈಜೋಡಿಸುತ್ತಿದ್ದರು. ಕ್ಷೇತ್ರ ಸಮನ್ವಯ ಅಧಿಕಾರಿ, ಶಿಕ್ಷಣ ಸಂಯೋಜಕರಾಗಿ ಸುದಿರ್ಘ ಕಾಲ ನಾಗರಾಜು ಅವರ ಉತ್ತಮ ಸೇವೆಯನ್ನು ಕಂಡಿದ್ದೇವೆ ಎಂದರು.

ಎಸ್.ಡಿ.ಎಂ.ಸಿ ಅಧ್ಯಕ್ಷ ಬಿ.ಎಸ್. ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸಿದರು. ಉಪ ಪ್ರಾಂಶುಪಾಲ ಮೋಹನರಾಜ, ಮುಖ್ಯಶಿಕ್ಷಕ ಮಲ್ಲಿಕಾರ್ಜುನ, ನಿವೃತ್ತ ಶಿಕ್ಷಕ ಲಕ್ಷ್ಮಪ್ಪ, ಅನಿಲ್‌ಕುಮಾರ್, ರಘುನಾಥ್, ಯೋಗ ಶಿಕ್ಷಕ ಚೇತನ್ ಗುರೂಜಿ, ಪ್ರಾಥಮಿಕ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ರಘುಕುಮಾರ್, ಹರ್ಷ ಇದ್ದರು.

# ವಾಣಿಜ್ಯಶಾಸ್ತ್ರ ಪಠ್ಯಕ್ರಮ ವಿನ್ಯಾಸ ಕಾರ್ಯಾಗಾರ



• ಪ್ರಜೋದಯ ವರದಿ

**ಹಾಸನ:** ಹಾಸನ ವಿಶ್ವವಿದ್ಯಾಲಯದ ವತಿಯಿಂದ ವಾಣಿಜ್ಯಶಾಸ್ತ್ರ ಪಠ್ಯಕ್ರಮ ವಿನ್ಯಾಸ ಕುರಿತು ಒಂದು ದಿನದ ಕಾರ್ಯಾಗಾರವನ್ನು ಜಿಲ್ಲೆಯ ಎಲ್ಲಾ ಪದವಿ ಕಾಲೇಜುಗಳ ವಾಣಿಜ್ಯಶಾಸ್ತ್ರ ಪ್ರಾಧ್ಯಾಪಕರಿಗಾಗಿ ನಗರದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸ ಲಾಗಿತ್ತು.

ಕಾರ್ಯಾಗಾರವನ್ನು ಹಾಸನ ವಿಶ್ವವಿದ್ಯಾಲಯ ವಾಣಿಜ್ಯಶಾಸ್ತ್ರ ಶಿಕ್ಷಕರ ಸಂಘದ ಸಹಯೋಗದಲ್ಲಿ ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಹಾಸನ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ತರೀಕೆರೆ. ಸಿ.ತಾರನಾಥ್ ಅವರು ಮಾತನಾಡಿ, ''ಬದಲಾವಣೆ ಇಂದಿನ ಅಗತ್ಯ, ಉತ್ತಮ ಪಠ್ಯಕ್ರಮ ಉತ್ತಮ ವಿದ್ಯಾರ್ಥಿಗಳನ್ನು ಸೃಷ್ಟಿಸಲು ಸಾಧ್ಯ'' ಎಂದು ಅಭಿಪ್ರಾಯಪಟ್ಟರು.

ವಾಣಿಜ್ಯಶಾಸ್ತ್ರ ಅಧ್ಯಯನ ಮಂಡಳಿಯ ಅಧ್ಯಕ್ಷ ಡಾ. ಟಿ.ಎಸ್. ದೇವರಾಜ್ ಅವರು ಮಾತನಾಡಿ, ಇಂದಿನ ಕಾಲಕ್ಕೆ ತಕ್ಕಂತೆ ಪಠ್ಯಕ್ರಮವನ್ನು ನವೀಕರಿಸುವ ಅಗತ್ಯತೆಯನ್ನು ವಿವರಿಸಿದರು.

ಕಾರ್ಯಾಗಾರದಲ್ಲಿ ಜಿಲ್ಲೆಯ ಹಲವಾರು ಕಾಲೇಜುಗಳ ಪ್ರಾಧ್ಯಾಪಕರು ಭಾಗವಹಿಸಿ ಪಠ್ಯಕ್ರಮ ಅಭಿವೃದ್ಧಿ ಕುರಿತಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಹಾಸನ ವಿಶ್ವವಿದ್ಯಾಲಯದ (ಕುಲಸಚಿವ) ಆಡಳಿತ ಬಿ.ಎ.ಜಗದೀಶ್ ಇದ್ದರು.

# ಲೌಕಿಕಸುಖ ತ್ಯಜಿಸಿ ಸತ್ಯದಾರಿಯಲ್ಲಿ ಸಾಗಿದ ಮಹಾವೀರ

## ಶಾಸಕ ಸಿ.ಎನ್.ಬಾಲಕೃಷ್ಣ ಅಭಿಮತ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಜೈನ ಧರ್ಮದ 24ನೇ ಮತ್ತು ಅಂತಿಮ ತೀರ್ಥಂಕರ ಭಗವಾನ್ ಮಹಾವೀರರು 30ನೇ ವಯಸ್ಸಿನಲ್ಲಿ ತಮ್ಮ ಲೌಕಿಕ ಸುಖವನ್ನು ತ್ಯಜಿಸಿ ಜೀವನದ ಸತ್ಯದಾರಿಯ ಹುಡುಕಾಟದಲ್ಲಿ ಸಾಗಿದ ಮಹಾನ್ ದಾರ್ಶನಿಕ ವ್ಯಕ್ತಿ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಪಟ್ಟಣದ ಮಿನಿ ವಿಧಾನ ಸೌಧದಲ್ಲಿ ಆಯೋಜಿಸಿದ್ದ ಭಗವಾನ್ ಮಹಾವೀರರ 2625ನೇ ಜಯಂತ್ಯುತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, 12 ವರ್ಷಗಳ ಕಾಲ ತಮ್ಮ ಇಂದ್ರೀಯಗಳನ್ನು ಹಿಡಿತದಲ್ಲಿಟ್ಟುಕೊಂಡಿದ್ದ ಮಹಾವೀರರು ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ ಮತ್ತು ಅಪರಿಗ್ರಹ ಎಂಬ 5 ಪ್ರಮುಖ ತತ್ವಗಳನ್ನು ತಮ್ಮ ಜೀವನದಲ್ಲಿ ಅಳ



ವಡಿಸಿಕೊಂಡಿದ್ದರು ಎಂದರು.

ಹಾಗಾಗಿ ಇಂದಿಗೂ ಕೂಡ ಜೈನ ಸಮುದಾಯ ಪ್ರಾಣಿ ಹಿಂಸೆ, ಅಸತ್ಯ, ಸುಳ್ಳು, ಮೋಸ, ಕಳ್ಳತನ ಸುಲಿಗೆಯನ್ನು ಸಹಿಸುವುದಿಲ್ಲ. ಲೌಕಿಕವಾದ ಸಂಬಂಧಗಳಿಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡರೆ ಮೋಕ್ಷ ಸಿಗುವುದಿಲ್ಲ ಎಂದು ಪ್ರತಿಪಾದಿಸುತ್ತದೆ. ಜೈನ ಸಮುದಾಯದ ಪ್ರತಿಯೊಬ್ಬರೂ ಕೂಡ ಕಷ್ಟಪಟ್ಟು ದುಡಿಯುವ ಶ್ರಮಿಕರು. ದೇಶದ ಆರ್ಥಿಕತೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಭಗವಾನ್ ಮಹಾವೀರರ ಬೋಧನೆ ಹಾಗೂ ತತ್ವಗಳನ್ನು ಪಾಲಿಸಿದರೆ ಸದೃಢ ರಾಷ್ಟ್ರವನ್ನು ಕಾಣಬಹುದಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಜೈನ ಸಮಾಜದ ಶ್ರೇಯೋಭಿವೃದ್ಧಿಗೆ ಪೂರಕವಾಗಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸುತ್ತಿರುವುದು ಸಂತಸದ ವಿಚಾರ. ಭಗವಾನ್ ಮಹಾವೀರರ ತತ್ವ -ಆದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಶ್ವೇತಾಂಬರ ಜೈನ ಸಮಾಜದ ತಾಲ್ಲೂಕು ಅಧ್ಯಕ್ಷ ಅಶೋಕ್ ಕುಮಾರ್ ಜೈನ್, ಜ್ವಾಲಾಮಾಲಿನಿ ಜೈನ ಮಹಿಳಾ ಮಂಡಳಿ ಅಧ್ಯಕ್ಷೆ ಯಶೋಧ ಜೈನ್, ಕಾರ್ಯದರ್ಶಿ ಮಮತಾ, ಪದಾಧಿಕಾರಿಗಳಾದ ಸುಜಾತ, ನಾಗರಾಜಯ್ಯ, ಭಾನು ಕುಮಾರ್, ಶಿರಸ್ತೆದಾರ್ ಪವನ್ ಕುಮಾರ್ ಮತ್ತಿತರಿದ್ದರು.

# ಸುಬ್ರಹ್ಮಣ್ಯ, ಧರ್ಮಸ್ಥಳಕ್ಕೆ ನೇರ ಬಸ್ ಸೌಲಭ್ಯಕ್ಕೆ ಹರ್ಷ

• ಪ್ರಜೋದಯ ವರದಿ

**ಅರಕಲಗೂಡು:** ಪುಣ್ಯ ಕ್ಷೇತ್ರ ಧರ್ಮಸ್ಥಳ ಹಾಗು ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದ ದರ್ಶನಕ್ಕೆ ಅನುಕೂಲವಾಗುವಂತೆ ಧರ್ಮಸ್ಥಳದಿಂದ ಮೈಸೂರಿಗೆ ನೇರ ಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿರುವುದನ್ನು ಸ್ವಾಗತಿಸಿ ಸಂತೆ ಮರೂರು ಗ್ರಾಮಸ್ಥರು ನೂತನ ಬಸ್‌ಗೆ ಪೂಜೆ ಸಲ್ಲಿಸಿ ಸಂಭ್ರಮಿಸಿದರು.

ಮಂಗಳವಾರ ಬೆಳಿಗ್ಗೆ 5-20ಕ್ಕೆ ಆಗಮಿಸಿದ ಸಾರಿಗೆ ಬಸ್‌ನ್ನು ಗ್ರಾಮಸ್ಥರು ತಡೆದು ಹೂವಿನ ಅಲಂಕಾರಗೊಳಿಸಿ ಪೂಜೆ ಸಲ್ಲಿಸಿದರಲ್ಲದೆ, ಕೆಲವರು ಬಸ್ ಏರಿ ಸುಬ್ರಹ್ಮಣ್ಯ, ಧರ್ಮಸ್ಥಳಕ್ಕೆ ಪ್ರಯಾಣ ಕೂಡ ಆರಂಭಿಸಿದರು.

ಈ ನೂತನ ಬಸ್ಸು ನಿತ್ಯವೂ ಬಿಸಿಲೆ ಘಾಟ್ ಮೂಲಕ ಅರಕಲಗೂಡು ಸಂತೆಮರೂರು, ಜೋಡಿಗುಬ್ಬಿ,




ಹಳ್ಳಿಮೈಸೂರು, ಭೇರ್ಯ, ಕೆ.ಆರ್. ಮಾರ್ಗವಾಗಿ ಮೈಸೂರಿಗೆ ತೆರಳಲಿ ತಂಗಲಿದೆ. ಪುನಃ ಬೆಳಿಗ್ಗೆ 6ಗಂಟೆಗೆ ಮೈಸೂರಿನಿಂದ ಹೊರಟು ಅದೇ ಮಾರ್ಗವಾಗಿ ಸಂಚರಿಸಿ ಕುಕ್ಕೆ ಸುಬ್ರಹ್ಮಣ್ಯ ಮೂಲಕ ಧರ್ಮಸ್ಥಳಕ್ಕೆ ತೆರಳಲಿದೆ. ನಿತ್ಯವೂ ತಾಲೂಕಿನಿಂದ ಕುಕ್ಕೆ ಸುಬ್ರಹ್ಮಣ್ಯ, ಧರ್ಮಸ್ಥಳಕ್ಕೆ ಪ್ರಯಾಣಿಕರು ಹೋಗಿಬರುತ್ತಿದ್ದು, ಈ ನೂತನ ಸಾರಿಗೆ ಬಸ್ ಅತೀ ಸಮೀಪ ಮಾರ್ಗದಲ್ಲಿ ಇರುವ ಕಾರಣ ಹೆಚ್ಚಿನ ಪ್ರಯಾಣಿಕರು ಈ ಬಸ್ ಸೌಲಭ್ಯವನ್ನು ಪಡೆಯಲು ಅವಕಾಶ ದೊರೆತಂತೆ ಆಗಿದೆ ಎಂದು ಪ್ರಯಾಣಿಕರು ಸಂತಸ ವ್ಯಕ್ತಪಡಿಸಿದರು.

ಅರಕಲಗೂಡಿನಿಂದ ಸಂತೆ ಮರೂರು - ಜೋಡಿಗುಬ್ಬಿ, ಹಳ್ಳಿ ಮೈಸೂರು ಮಾರ್ಗವಾಗಿ ಮೈಸೂರಿಗೆ ತೆರಳಲು ಸಕಾಲಿಕವಾಗಿ ಸಾರಿಗೆ ಬಸ್ ಸೇವೆಯಿಂದ ಈ ಭಾಗದ ಹತ್ತಾರು ಹಳ್ಳಿಗಳ ಜನರು ವಂಚನೆಗೊಂಡಿದ್ದರು. ಈ ಮಾರ್ಗ ಅರಕಲಗೂಡಿನಿಂದ ಮೈಸೂರಿಗೆ ಸಂಚರಿಸುವ ಪ್ರಯಾಣಿಕರಿಗೆ ಅತೀ ಸಮೀಪವಾಗಿತ್ತು. ಅಲ್ಲದೆ ಬೆಳಕಿನ ವೇಳೆ ಬಿಸಿಲೆ ಘಾಟ್ ಸೌಂಧರ್ಯವನ್ನು ಸವಿಯಲು ಮತ್ತೊಂದು ಅವಕಾಶ ದೊರೆತಂತ್ತಾಗಿದೆ. ಈ ಅವಕಾಶ ಮತ್ತು ಪ್ರಯಾಣಿಕರ ಸಮಸ್ಯೆಗೆ ಪರಿಹಾರ ಒದಗಿಸಿರುವ ಸಾರಿಗೆ ಸಂಸ್ಥೆ ಅಧಿ ಕಾರಿಗಳನ್ನು ಇಡೀ ಪ್ರಯಾಣಿಕರ ಪರವಾಗಿ ಸಂತೆಮರೂರು ಗ್ರಾಮಸ್ಥರು ಅಭಿನಂದಿಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಶಾಂತರಾಜೇ ಅರಸು, ಮಲ್ಲರಾಜೇ ಅರಸು, ಕಾರ್ತಿಕ ಅರಸು, ಬಾಲರಾಜೇ ಅರಸು ಇತರರು ಹಾಜರಿದ್ದರು.

# ಮಹಿಳಾ ಸಬಲೀಕರಣಕ್ಕೆ ಭದ್ರಬುನಾದಿ ಹಾಕಿದ ಕಲ್ಯಾಣ ಶಿವಶರಣರು

• ಪ್ರಜೋದಯ ವರದಿ

**ಬಸವಕಲ್ಯಾಣ:** ಜನಸಾಮಾನ್ಯರ ಎದೆಗೆ ನಾಟುವಂತೆ ಕಟ್ಟಿಕೊಟ್ಟಂತಹ ಸಾಹಿತ್ಯ ಪ್ರಕಾರ ಜಾಗತಿಕವಾಗಿ ಯಾವುದಾದರೂ ಇದ್ದರೆ ಅದು ಕನ್ನಡದ ವಚನ ಸಾಹಿತ್ಯ ಮಾತ್ರ. ಸಮ ಸಮಾಜವನ್ನು ಕಟ್ಟಿ ಕೊಟ್ಟದ್ದು ಶರಣರ ವಚನ ಸಾಹಿತ್ಯ, ಅಕ್ಕಮಹಾದೇವಿ ಲೋಕದ ಪ್ರಪ್ರಥಮ ಮಹಿಳಾ ಕವಯಿತ್ರಿ. ಮಹಿಳಾ ಸಾಹಿತ್ಯ ಬೆಳೆದು ಬಂದುದ್ದು ಮೊಟ್ಟ ಮೊದಲಿಗೆ ಕಲ್ಯಾಣ ನಾಡಿನಲ್ಲಿ ಎಂದು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಬೆಂಗಳೂರು ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಎಸ್.ಉಪ್ಪಾರ್ ಅವರು ತಿಳಿಸಿದರು.

ಬಸವ ಕಲ್ಯಾಣ ನಗರದ ಪಂಚಾಯತ್‌ರಾಜ್ ಪದವಿ ಮಹಾ ವಿದ್ಯಾಲಯದಲ್ಲಿ ಹಮ್ಮಿಕೊಂಡ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಬೆಂಗಳೂರು ಮತ್ತು ಬೀದರ್ ಜಿಲ್ಲಾ ಘಟಕದ ನೂತನದ ಅಧ್ಯಕ್ಷರ ಪದಗ್ರಹಣ ಜಿಲ್ಲಾಮಟ್ಟದ ಕವಿಗೋಷ್ಠಿ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದ ಉದ್ಘಾಟಿಸಿ ಅವರು ಮಾತನಾಡಿ, ಶರಣರು ಕಾಯಕ ಸಿದ್ಧಾಂತವನ್ನು



ಕಟ್ಟಿಕೊಟ್ಟರು. ಜೊತೆಗೆ ಮಹಿಳೆಯರ ಬಗ್ಗೆ ಅವರಿಗೆ ಸಂವೇದನೆಯಿತ್ತು. ಅಂತಲೇ ಅಂದಿನ ದಿನಗಳಲ್ಲಿಯೇ ಮಹಿಳೆಯರಿಗೆ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟರು ಎಂದು ನುಡಿದರು.

ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ವಿಶ್ವ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಮಹಿಳೆಯರಿಗೆ ಪ್ರಶಸ್ತಿ ನೀಡುತ್ತಿರುವುದು ನಿಜಕ್ಕೂ ಸ್ವಾಗತ. ಹೆಣ್ಣು ಅಬಲೆಯಲ್ಲ ಸಬಲೆ. ಅಮ್ಮ ಎಂದರೆ ಅದೊಂದು ಪದವಲ್ಲ ಅದು ಭಾವನಾತ್ಮಕ ಸಂಬಧಕ್ಕೆ ಕಾರಣವಾಗುತ್ತದೆ ಎಂದರು.

ಅಂತರಾಷ್ಟ್ರಿಯ ವಿಶ್ವ ಮಹಿಳಾ ದಿನಾಚರಣೆ ನಿಮಿತ್ತ ವಿವಿಧ ಇಲಾಖೆ ಅಲ್ಲದೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ವಿಜಯಲಕ್ಷ್ಮಿ ಗುರುನಾಥ ಗಡ್ಡೆ, ರೇಖಾ ರಾಜು ಹೊಸಮನಿ, ಕು. ಆಶಾರಾಣಿ ಸಂಗಶಟ್ಟಿ ಬಾವಿದೊಡ್ಡಿ, ಸರೋಜಾ ಕಾಶಿನಾಥ ಚಂದಾಪುರೆ, ಜ್ಯೋತಿ ಅಲಶೆಟ್ಟಿ, ಜನಾಬಾಯಿ, ಸರಸ್ವತಿ ಕಾಂಬಳೆ, ಭಾರತಬಾಯಿ ಖರ್ಗೆ, ಮನುಸಾ ರೋಳಾ, ಜ್ಯೋತಿ ಧನ್ನೂರೆ, ವೈಜಯಂತ್ತಿ , ಸುಮಿತ್ರಾ ದಾವಣಗಾವೆ, ಅಶ್ವಿನಿ ಶರಣಪ್ಪ, ಆನಂದಾ ಜಮಾದಾರ, ರೇಖಾ ತಾನಾಜಿರಾವ ಕಾಂಬಳೆ, ಮಹಿಳಾ ಸಾಧಕರನ್ನು ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನಿಸಲಾಯಿತು, ಎಂ. ಶ್ರೀಕಾಂತ ನಿರೂಪಿಸಿದರು. ಕವಿತಾ ಮಾಲಿ ಪಾಟೀಲ್, ಲಕ್ಷ್ಮಿ ಮದರಗಾಂವಕರ್, ಈಶ್ವರ ತಡೋಳಾ ಹಾಜರಿದ್ದರು.

## ಮಿಲಿಟರಿ ಕಾರ್ಯಾಚರಣೆ ಕೊನೆಗೊಳಿಸಲು ಮುಕ್ತನಾಗಿದ್ದೇನೆ: ಅಮೇರಿಕಾ ಅಧ್ಯಕ್ಷ

# ಯುದ್ಧ ಅಂತ್ಯಗೊಳಿಸಲು ಟ್ರಂಪ್ ಒಲವು

• ಪ್ರಜೋದಯ ವರದಿ

**ನವದೆಹಲಿ:** ಹಾರ್ಮುಜ್ ಜಲಸಂಧಿಯು ಬಹುತೇಕ ಬಂದ್ ಆಗಿರುವುದು ಮುಂದುವರಿದರೂ ಇರಾನ್ ವಿರುದ್ಧದ ಅಮೇರಿಕಾ ಮಿಲಿಟರಿ ಕಾರ್ಯಾಚರಣೆಯನ್ನು ಕೊನೆಗೊಳಿಸಲು ತಾನು ಮುಕ್ತನಾಗಿದ್ದೇನೆ ಎಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎಂದು ವರದಿ ತಿಳಿಸಿದೆ.

ಬಲವಂತವಾಗಿ ಹೊರ್ಮುಜ್ ಜಲಸಂಧಿಯನ್ನು ತೆರೆಯುವ ಪ್ರಕ್ರಿಯೆಗೆ ಕೈಹಾಕಿದರೆ ಸಂಘರ್ಷವು ಅವರ ಯೋಜಿತ ಮೀರುತ್ತದೆ ಎಂದು ಟ್ರಂಪ್ ಮತ್ತು ಅವರ ತಂಡವು ಅಂದಾಜಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹೀಗಾಗಿ, ಅಮೇರಿಕಾವು ಯುದ್ಧ ವಿರಾಮಕ್ಕೆ ರಾಜತಾಂತ್ರಿಕ ಮಾರ್ಗ ಹಿಡಿಯುವ ಮೊದಲು ಇರಾನ್‌ನ ನೌಕಾ ಸಾಮರ್ಥ್ಯ ಮತ್ತು ಕ್ಷಿಪಣಿ ದಾಸ್ತಾನುಗಳನ್ನು ದುರ್ಬಲಗೊಳಿಸುವ ಕಾರ್ಯಾ



ಚರಣೆಯತ್ತ ಆದ್ಯತೆ ನೀಡುತ್ತಿದೆ ಎಂದು ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ.

ರಾಜತಾಂತ್ರಿಕ ಪ್ರಯತ್ನಗಳು ವಿಫಲವಾದರೆ, ಯುರೋಪ್ ಮತ್ತು ಕೊಲ್ಲಿಯಲ್ಲಿರುವ ಮಿತ್ರರಾಷ್ಟ್ರಗಳು ಜಲಸಂಧಿಯನ್ನು ಮತ್ತೆ ತೆರೆಯುವಲ್ಲಿ ಮುಂದಾಳತ್ವ ವಹಿಸುವಂತೆ ಅಮೇರಿಕಾ ಒತ್ತಾಯಿಸುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳನ್ನು ಉಲ್ಲೇಖಿಸಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ತಿಳಿಸಿದೆ.

ಪರ್ಷಿಯನ್ ಗಲ್ಫ್ ಮತ್ತು ಹಿಂದೂ ಮಹಾಸಾಗರವನ್ನು ಸಂಪರ್ಕಿಸುವ ಹೊರ್ಮುಜ್ ಜಲಸಂಧಿಯು ಬಹುತೇಕ ಬಂದ್ ಆಗಿದ್ದು, ಜಾಗತಿಕ ತೈಲ ಟ್ಯಾಂಕರ್, ಸರಕು ಸಾಗಣೆ ಮೇಲೆ ಗಂಭೀರ ಪರಿಣಾಮ ಬೀರಿದೆ. ಸಾಗರದಲ್ಲಿ ಒಂದು ಬದಿಯಲ್ಲಿ ಹಲವು ಹಡುಗುಗಳು ಬಹಳ ಸಮಯದಿಂದ ನಿಂತಲ್ಲೇ ನಿಂತಿದ್ದು, ಕೆಲ ದೇಶಗಳ ಹಡಗುಗಳಿಗೆ ಮಾತ್ರ ಸಂಚಾರ ಅನುಮತಿ ಸಿಕ್ಕಿದೆ.

### ಇರಾನ್ ಆಸ್ಪತ್ರೆಗಳ ಮೇಲೆ ಅಮೆರಿಕ ದಾಳಿ

ಏತನ್ಮಧ್ಯೆ, ಟ್ರಂಪ್ ಸರ್ಕಾರ ಇರಾನ್ ದೇಶದ ತೈಲ ಬಾವಿಗಳು ಮತ್ತು ವಿದ್ಯುತ್ ಗ್ರಿಡ್ ಅನ್ನು ನಾಶಮಾಡುವುದಾಗಿ ಬೆದರಿಕೆ ಹಾಕಿದ ನಂತರ, ಇರಾನ್ ಮಾಧ್ಯಮಗಳು ಮಂಗಳವಾರ ಅಮೆರಿಕ-ಇಸ್ರೇಲ್ ದಾಳಿಗಳ ಅಲೆಯು ಮಿಲಿಟರಿ ನೆಲೆಗಳು, ಕ್ಯಾನ್ಸ ರ್ ಔಷಧ ಸ್ಥಾವರ ಮತ್ತು ಧಾರ್ಮಿಕ ಸ್ಥಳದ ಮೇಲೆ ಬಿದ್ದಿದೆ ಎಂದು ವರದಿ ಮಾಡಿದೆ.

ಎಎಫ್‌ಪಿ ಪರಿಶೀಲಿಸಿದ ವೀಡಿಯೊ ದೃಶ್ಯಗಳು ಮಧ್ಯ ಇರಾನ್‌ನ ಇಸ್ಫಹಾನ್‌ನಲ್ಲಿ ಕನಿಷ್ಠ ಎರಡು ಬೃಹತ್ ಸ್ಫೋಟಗಳು ಮತ್ತು ಹೊಗೆಯ ಕಂಬಗಳನ್ನು ತೋರಿಸಿವೆ. ವಾಯುವ್ಯದಲ್ಲಿರುವ ಜಂಜನ್‌ನಲ್ಲಿರುವ ಶಿಯಾ ಧಾರ್ಮಿಕ ಕೇಂದ್ರವಾದ ಗ್ರ್ಯಾಂಡ್ ಹುಸೇನಿಯಾ ಹಾನಿಗೊಳಗಾಗಿದೆ ಎಂದು ಇರಾನ್ ಸರ್ಕಾರಿ ಮಾಧ್ಯಮ ವರದಿ ಮಾಡಿದೆ.

ಯಾವುದೇ ಕಾರ್ಯಾಚರಣೆಯು ಯಾವಾಗಲೂ ನಾಲ್ಕರಿಂದ ಆರು ವಾರಗಳವರೆಗೆ ಇರಬೇಕೆಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕೆರೋಲಿನ್ ಲೀವಿಟ್ ಪುನರುಚ್ಚರಿಸಿದರು. ಇರಾನ್ ವಿರುದ್ಧದ ನಮ್ಮ ಕಾರ್ಯಾಚರಣೆಯು 30ನೇ ದಿನಕ್ಕೆ ಕಾಲಿಟ್ಟಿದೆ ಎಂದು ಅವರು ಹೇಳಿದ್ದಾರೆ.

ಈ ನಡುವೆ ಅಮೇರಿಕಾ 2,000 ಪೌಂಡ್‌ಗಳ ಬಂಕರ್ ಬಸ್ಟರ್ ಬಾಂಬ್‌ಗಳನ್ನು ಬಳಸಿಕೊಂಡು ಕೋಟೆ ಅಥವಾ ಭೂಗತ ರಚನೆಗಳನ್ನು ಗುರಿಯಾಗಿಸಿಕೊಂಡು ಇರಾನ್‌ನ ಇಸ್ಫಹಾನ್‌ನಲ್ಲಿರುವ ಪ್ರಮುಖ ಯುದ್ಧಸಾಮಗ್ರಿ ಸೌಲಭ್ಯದ ಮೇಲೆ ದಾಳಿ ನಡೆಸಿದೆ ಎಂದು ವರದಿಯಾಗಿದೆ. ಟ್ರಂಪ್ ಈ ಕಾರ್ಯಾಚರಣೆಯ ದೃಶ್ಯಗಳನ್ನು ತಮ್ಮ ಸಾಮಾಜಿಕ ಮಾಧ್ಯಮ ವೇದಿಕೆ ಟ್ರುತ್‌ನಲ್ಲಿ ಹಂಚಿಕೊಂಡಿದ್ದರು.

ಫೆಬ್ರುವರಿ 28ರಿಂದ ಅಮೆರಿಕ ಮತ್ತು ಇಸ್ರೇಲ್, ಇರಾನ್ ಮೇಲೆ ಜಂಟಿ ದಾಳಿಗಳನ್ನು ಪ್ರಾರಂಭಿಸಿದ ನಂತರ ಸಂಘರ್ಷ ಉಲ್ಬಣಗೊಂಡಿದೆ. ಇರಾನ್ ಈಗ ಪ್ರತೀಕಾರದ ದಾಳಿ ನಡೆಸುತ್ತಿದ್ದು, ಜಾಗತಿಕವಾಗಿ ಪ್ರಮುಖ ತೈಲ ಮತ್ತು ಸರಕು ಸಾಗಣೆ ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಮುಚ್ಚಿದೆ.

# ಇಂದಿನಿಂದ ಜಿಲ್ಲಾದ್ಯಂತ ಸ್ವಯಂ ಮನೆಗಣತಿ ಪ್ರಾರಂಭ


## ಜನಗಣತಿ ಮೊದಲ ಹಂತ ಆರಂಭ : ಏ.16ರಿಂದ ಗಣತಿದಾರರು ಮನೆ ಮನೆಗೆ ಭೇಟಿ

• ಪ್ರಜೋದಯ ವರದಿ

**ಹಾಸನ:** ರಾಷ್ಟ್ರೀಯ ಜನಗಣತಿ ಮೊದಲ ಹಂತದ ಮನೆ ಗಣತಿ ಪ್ರಕ್ರಿಯೆ ಬುಧವಾರ ಜಿಲ್ಲಾದ್ಯಂತ ಪ್ರಾರಂಭವಾಗಲಿದೆ. ಏ.1 ರಿಂದ 15ರ ವರೆಗೆ ನಾಗರಿಕರಿಗೆ ಸ್ವಯಂ ಗಣತಿಗೆ ಆನ್ ಲೈನ್ ಮೂಲಕ ಅವಕಾಶ ನೀಡಲಾಗಿದೆ.

2027ರ ಜನಗಣತಿ ಎರಡು ಹಂತದಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿ ಮನೆಪಟ್ಟಿ ಮತ್ತು ಮನೆ ಗಣತಿ ಏ.16ರಿಂದ ಮೇ 15ರವರೆಗೆ ನಡೆಯಲಿದೆ. 2ನೇ ಹಂತ ಜನಸಂಖ್ಯಾ ಗಣತಿ 2027 ಫೆಬ್ರವರಿ ತಿಂಗಳಲ್ಲಿ ನಡೆಯಲಿದೆ. ಈ ಹಿನ್ನಲೆ ಮನೆ ಗಣತಿಗೂ ಮೊದಲು 15 ದಿನಗಳ ಕಾಲ ಸ್ವಯಂ ಗಣತಿಗಾಗಿ ವಿಶೇಷ ಸೌಕರ್ಯ ಒದಗಿಸಲಾಗಿದೆ. ಈ ಸಮಯದಲ್ಲಿ ಜನರು ತಮ್ಮ ವಿವರವನ್ನು ಆನ್‌ಲೈನ್‌ನಲ್ಲಿ ಭರ್ತಿ ಮಾಡಬದೆಂದು ಜಿಲ್ಲಾಡಳಿತ ತಿಳಿಸಿದೆ.

ಈ ಗಣತಿ ಪ್ರಕ್ರಿಯೆ ಜಿಲ್ಲೆಯ ಗ್ರಾಮೀಣ ಹಾಗು ನಗರ ಪ್ರದೇಶಗಳಲ್ಲಿ ವ್ಯಾಪಕವಾಗಿ ನಡೆಯಲಿದೆ. ಜನಗಣತಿ ಕಾರ್ಯದ ಮೊದಲ ಹಂತದಲ್ಲಿ ಮನೆಗಳ ವಿವರ ಸಂಗ್ರಹಿಸುವುದಕ್ಕೆ ಒತ್ತು ನೀಡಲಾಗುತ್ತದೆ. ಏ.16ರ ನಂತರ ಪ್ರತಿಯೊಂದು ಮನೆಗೆ ಭೇಟಿ ನೀಡುವ ಗಣತಿದಾರರು ಮನೆಗಳ ಸ್ಥಿತಿ, ಕಟ್ಟಡದ ಸ್ವರೂಪ, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ,




ವಿದ್ಯುತ್, ಅಡುಗೆ ಇಂಧನ ಸೇರಿ ವಿವಿಧ ಮೂಲಭೂತ ಸೌಲಭ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸಲಿದ್ದಾರೆ.

ಜಿಲ್ಲಾಡಳಿತದಿಂದ ಈಗಾಗಲೇ ಗಣತಿದಾರರಿಗೆ ತರಬೇತಿ ನೀಡಲಾಗಿದ್ದು, ಡಿಜಿಟಲ್ ಸಾಧನ ಗಳ ಮೂಲಕ ಮಾಹಿತಿ ದಾಖಲಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಬಾರಿ ಜನಗಣತಿ ಪ್ರಕ್ರಿಯೆಯಲ್ಲಿ ಮೊಬೈಲ್ ಆ್ಯಪ್ ಬಳಕೆ ಹೆಚ್ಚಾಗಿ ನಡೆಯಲಿದೆ. ಮಾಹಿತಿ ಸಂಗ್ರಹಣೆಯಲ್ಲಿ ಪಾರದರ್ಶ ಕತೆ ಮತ್ತು ವೇಗ ಹೆಚ್ಚಲಿದೆ.

ಗಣತಿದಾರರು ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸರಿಯಾದ ಮಾಹಿತಿ ನೀಡಿ ಸಹಕರಿ ಸುವಂತೆ ಜಿಲ್ಲಾಡಳಿತ ಕೋರಿದ್ದಾರೆ. ಜನಗಣತಿ ಮಾಹಿತಿ ಸರ್ಕಾರದ ಯೋಜನೆಗಳು, ಅಭಿವೃದ್ಧಿ ಕಾರ್ಯಕ್ರಮಗಳು ಹಾಗು ಜನ ಸಂಖ್ಯಾ ಅಂಕಿ-ಅಂಶಗಳ ನಿರ್ಧಾರಕ್ಕೆ ಮಹತ್ವದ ಆಧಾರವಾ ಗುತ್ತದೆಂದು ತಿಳಿಸಿದ್ದಾರೆ.

ಮನೆಗಣತಿ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಎರಡನೇ ಹಂತದಲ್ಲಿ ಜನಸಂಖ್ಯೆ, ವಯಸ್ಸು, ಶಿಕ್ಷಣ, ಉದ್ಯೋಗ ಸೇರಿದಂತೆ ವೈಯಕ್ತಿಕ ವಿವರಗಳನ್ನು ಸಂಗ್ರಹಿಸಲಾಗುತ್ತದೆ.

**ಪಾಲಿಕೆಯಿಂದಲೂ ಸಿದ್ಧತೆ**

ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಏ.1ರಿಂದ ಆರಂಭಗೊಳ್ಳಲಿರುವ ಮನೆಗಣತಿಗೆ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಪಾಲಿಕೆ ಆಯುಕ್ತ ಕೃಷ್ಣಮೂರ್ತಿ ಅವರು ತಿಳಿಸಿದ್ದಾರೆ.

ಏ.1ರಿಂದ 15ರವರೆಗೆ ನಾಗರಿಕರು ಸ್ವಯಂ ಆನ್‌ಲೈನ್ ಮೂಲಕ ಮಾಹಿತಿ ಸಲ್ಲಿಸುವ ಅವಕಾಶವಿದ್ದು, 34 ಪ್ರಶ್ನೆಗಳ ಫಾರ್ಮ್‌ನಲ್ಲಿ ಕುಟುಂಬ, ಶಿಕ್ಷಣ, ಉದ್ಯೋಗ ಸೇರಿ ಮೂಲ ಭೂತ ಮಾಹಿತಿಯನ್ನು ದಾಖಲಿಸಬಹುದು. 2ನೇ ಹಂತವಾಗಿ ಏ.15ರಿಂದ ಮೇ 15ರವರೆಗೆ ಗಣತಿದಾರರು ಮನೆಮನೆಗೆ ಭೇಟಿ ನೀಡಿ, ಮಾಹಿತಿ ಸಂಗ್ರಹ ಹಾಗು ಪರಿಶೀಲನೆ ನಡೆಸಲಿದ್ದಾರೆ. ಈ ಕಾರ್ಯಕ್ಕಾಗಿ ನಗರವನ್ನು 339 ಬ್ಲಾಕ್‌ಗಳಾಗಿ ವಿಭಜಿಸಿ, 400ಕ್ಕೂ ಹೆಚ್ಚು ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ಸಂಗ್ರಹವಾಗುವ ಮಾಹಿತಿ ಸಂಪೂರ್ಣ ಗೌಪ್ಯವಾಗಿರುತ್ತದೆಂದು ಸ್ಪಷ್ಟಪಡಿಸಿದ್ದಾರೆ.

### ಸ್ವಯಂ ಗಣತಿ ಮಾಡುವ ವಿಧಾನ

- ಅಧಿಕೃತ ಪೋರ್ಟಲ್ c c s e g ಗೆ ಭೇಟಿ ನೀಡುವುದು.
- ನಿಮ್ಮ ಮೊಬೈಲ್ ಸಂಖ್ಯೆಗೆ ಬರುವ ಒಟಿಪಿ ಮೂಲಕ ಲಾಗಿನ್ ಆಗುವುದು.
- ನಿಮ್ಮ ರಾಜ್ಯ, ಜಿಲ್ಲೆ ಮತ್ತು ಸ್ಥಳೀಯ ವಿವರಗಳನ್ನು ಆಯ್ಕೆ ಮಾಡುವುದು.
- ಡಿಜಿಟಲ್ ಮ್ಯಾಪ್‌ನಲ್ಲಿ ನಿಮ್ಮ ಮನೆಯ ಸ್ಥಳವನ್ನು ಗುರುತಿಸುವುದು.
- ನಿಮ್ಮ ಮನೆ ಮತ್ತು ಕುಟುಂಬಕ್ಕೆ ಸಂಬಂಧಿಸಿದ ವಿವರಗಳನ್ನು ಭರ್ತಿ ಮಾಡುವುದು.
- ನೀವು ಮಾಹಿತಿ ಸಲ್ಲಿಸಿದ ನಂತರ ನೀವು D ಅನ್ನು ಸ್ವೀಕರಿಸುತ್ತೀರಿ.
- ನಿಮ್ಮ D ಅನ್ನು ಸುರಕ್ಷಿತವಾಗಿರಿಸಿಕೊಳ್ಳುವುದು.
- ಗಣತಿದಾರರು ಭೇಟಿ ನೀಡಿದಾಗ ನಿಮ್ಮ D ಅನ್ನು ಒದಗಿಸುವುದು.
- ಗಣತಿದಾರರು D ಮೂಲಕ ವಿವರಗಳನ್ನು ದೃಢೀಕರಿಸುತ್ತಾರೆ.

# ಛಾಯಾಗ್ರಾಹಕರ ಮೇಲಿನ ಹಲ್ಲೆ ಖಂಡಿಸಿ ಪ್ರತಿಭಟನೆ

» ಮೊದಲನೇ ಪುಟದಿಂದ

ಛಾಯಾಗ್ರಾಹಕರ ಮೇಲೆ ಹಲ್ಲೆ ನಡೆಸಿರುವುದು ಖಂಡನೀಯ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಘಟನೆಯಲ್ಲಿ ಸುಮಾರು 5 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಕ್ಯಾಮೆರಾ ಹಾಗು ಇತರೆ ಛಾಯಾಚಿತ್ರೋಪಕರಣ ಹಾನಿಗೊಳಗಾಗಿದ್ದು, ಅದಕ್ಕೆ ಪರಿಹಾರ ಕೊಡಿಸಬೇಕೆಂದು ಒತ್ತಾಯಿಸಿದರು.

ಛಾಯಾಗ್ರಾಹಕರು ದೈಹಿಕ ಹಾಗು ಮಾನಸಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಈ ಘಟನೆ ರಾಜ್ಯಾದ್ಯಂತ ಛಾಯಾಗ್ರಾಹಕರಲ್ಲಿ ಭೀತಿ ಮೂಡಿಸಿದೆ. ವೃತ್ತಿಪರರಿಗೆ ಸುರಕ್ಷಿತ ವಾತಾವರಣದ ಅಗತ್ಯತೆ ಕೋರಿದೆ. ಈ ನಿಟ್ಟಿನಲ್ಲಿ ಸರ್ಕಾರ ಯೋಚಿಸಬೇಕೆಂದು ಮನವಿ ಮಾಡಿದ ಅವರು, ಛಾಯಾಗ್ರಾಹಕರಿಗೆ ಸುರಕ್ಷಿತವಾಗಿ ಕೆಲಸ ಮಾಡಲು ಅನುಕೂಲಕರ ವಾತಾವರಣ ಕಲ್ಪಿಸಬೇಕು. ಸಂಬಂಧಿತ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಹಾಗೂ ಶೂಟಿಂಗ್ ಸ್ಥಳಗಳಲ್ಲಿ ಸ್ಪಷ್ಟ ಮಾರ್ಗಸೂಚಿ ಜಾರಿಗೊಳಿಸಬೇಕು. ಈ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳದಿದ್ದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸುವ ಎಚ್ಚರಿಕೆ ನೀಡಿದರು.

ಛಾಯಗ್ರಾಹಕರ ಸಂಘದ ಜಿಲ್ಲಾಧ್ಯಕ್ಷ ಎಸ್.ನಿಂಗರಾಜು, (ಸ್ವಾಮಿ) ಮಾತನಾಡಿ, ಬೆಟ್ಟದ



ಭೈರವೇಶ್ವರ ದೇವಸ್ಥಾನದ ಆವಣದಲ್ಲಿ ಪ್ರೀ-ವೆಡ್ಡಿಂಗ್ ಶೂಟ್ ವೇಳೆ ಸ್ಥಳೀಯರು ತೋರಿದ ಗೂಂಡಾ ವರ್ತನೆ, ಹಲ್ಲೆ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿವೆ. ಘಟನೆಯಿಂದ ಛಾಯಾಗ್ರಾಹಕರಿಗೆ ಆರ್ಥಿಕವಾಗಿ ಭಾರೀ ನಷ್ಟವಾಗಿದ್ದು, ವೃತ್ತಿಪರ ಬದುಕಿನ ಮೇಲೆ ದುಷ್ಪರಿಣಾಮ ಬೀರಿದೆ ಎಂದರು.

ವೃತ್ತಿಪರ ಛಾಯಾಗ್ರಾಹಕರು ತಮ್ಮ ಜೀವನೋಪಾಯಕ್ಕಾಗಿ ಶ್ರಮಿಸುತ್ತಿರುವ ಸಂದರ್ಭದಲ್ಲಿ ಇಂತಹ ಹಲ್ಲೆಗಳು ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆ. ಇನ್ನೆಂದೂ ಹೀಗೆ ನಡೆಯಬಾರದು. ಇಂತಹ ಘಟನೆ ಮುಂದುವರಿದರೆ ಛಾಯಾಗ್ರಹಣ ವೃತ್ತಿಯ ಭದ್ರತೆ ಪ್ರಶ್ನಾರ್ಹವಾಗಲಿದೆ. ಈ ಸಂಬಂಧ ಅಧಿಕಾರಿಗಳು ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್ ಅವರಿಗೆ ಮನವಿ ಸಲ್ಲಿಸಿದರು.

ಸಂಘದ ಕಾರ್ಯದರ್ಶಿ ಟಿ.ಸಿ. ನಾಗರಾಜು, ಪ್ರಧಾನ ಕಾರ್ಯದರ್ಶಿ ಬಿ.ಕೆ. ಧರ್ಮಶೆಟ್ಟಿ, ತಾಲ್ಲೂಕು ಅಧ್ಯಕ್ಷ ಎಸ್.ಜಿ.ನಾಗರಾಜು ಇದ್ದರು.

# ಮೀಸಲು ಅರಣ್ಯ ಮಂಜೂರು: ಕ್ರಮಕ್ಕೆ ಆಗ್ರಹ

• ಪ್ರಜೋದಯ ವರದಿ



**ಹಾಸನ:** ಸಕಲೇಶಪುರ ತಾಲ್ಲೂಕು ಕಿರುಹುಣಸೆ ಗ್ರಾಮದ ಮೀಸಲು ಅರಣ್ಯ ಜಾಗವನ್ನು ಅಕ್ರಮವಾಗಿ ಖಾಸಗಿ ವ್ಯಕ್ತಿಗೆ ಮಂಜೂರು ಮಾಡಿರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಆದಿದ್ರಾವಿಡ ತುಳು ಸಮಾಜ ಸೇವಾ ಸಂಘದ ಅಧ್ಯಕ್ಷ ಬಿ.ಶಂಕರ್ ಅವರು ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಿರುಹುಣಸೆ ಗ್ರಾಮದ ಸರ್ವೆ ನಂ.72/1ರ 4 ಎಕರೆ 38 ಗುಂಟೆ ಜಮೀನು ಮೂಲತಃ ಮೀಸಲು ಅರಣ್ಯ ವ್ಯಾಪ್ತಿಗೆ ಸೇರಿದೆ. ಅದನ್ನು ಕಾನೂನು ನಿಯಮ ಉಲ್ಲಂಘಿಸಿ ಖಾಸಗಿ ವ್ಯಕ್ತಿಗೆ ಮಂಜೂರು ಮಾಡಲಾಗಿದೆ. ಈ ಮಂಜೂರಾತಿ ಪ್ರಕ್ರಿಯೆಯಲ್ಲಿ ತಾಲ್ಲೂಕು ಆಡಳಿತದ ಕೆಲ ಅಧಿಕಾರಿಗಳು, ಗ್ರಾಮ ಲೆಕ್ಕಿಗ ಶಶಿಧರ್, ರಾಜಸ್ವ ನಿರೀಕ್ಷಕರು ಹಾಗು ಸರ್ವೇ ಅಧಿಕಾರಿಗಳು ಸೇರಿ ಹಲವರು ಶಾಮೀಲಾಗಿದ್ದಾರೆ ಎಂದು ಆರೋಪಿಸಿದರು.

ಮಂಜೂರಾತಿಗಾಗಿ ಅಗತ್ಯ ದಾಖಲೆಗಳನ್ನು ತರಾತುರಿಯಲ್ಲಿ ಸಿದ್ಧಪಡಿಸಿ, ನಿಯಮಾವಳಿ ಕಡೆಗಣಿಸಿ ಮಂಜೂರಾತಿ ನೀಡಲಾಗಿದೆ. ಮಾತ್ರವಲ್ಲದೆ, ಜಮೀನಿನ ದುರಸ್ತಿ ಕಾರ್ಯಗಳಿಗೂ ಸಹಕಾರ ನೀಡಲಾಗಿದೆ. ಅದರಿಂದ ಸರ್ಕಾರಕ್ಕೆ ನಷ್ಟ ಉಂಟಾಗಿದೆ. ಮೀಸಲು ಅರಣ್ಯ ಪ್ರದೇಶ ವನ್ನು ಖಾಸಗಿ ವ್ಯಕ್ತಿ ಹಕ್ಕಿಗೆ ನೀಡುವುದು ಪರಿಸರದ ಮೇಲೆಯೂ ದುಷ್ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಪ್ರಕರಣವನ್ನು ಗಂಭೀರವಾಗಿ ಪ ' ರಿ ಗ ' ಣಿ ಸ ' ಬ ' ೇ ಕ ' ೆಂ ದ ' ು ಒತ್ತಾಯಿಸಿದರು.

ಈ ಸಂಬಂಧ ಸಂಬಂಧಪಟ್ಟ ಮೇಲಾಧಿಕಾರಿಗಳು ತಕ್ಷಣ ಸಂಪೂರ್ಣ ಕಡತ ತರಿಸಿ ಸೂಕ್ಷ್ಮ ಪರಿಶೀಲನೆ ನಡೆಸಿ, ಅಕ್ರಮ ಮಂಜೂರಾತಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ವಿಧಿಸಬೇಕು. ಅಕ್ರಮ ಪ್ರಕರಣವನ್ನು ನಿರ್ಲಕ್ಷಿಸಿದರೆ ಅಥವಾ ತನಿಖೆಯಲ್ಲಿ ವಿಳಂಬವಾದರೆ, ವಿವಿಧ ಸಂಘಟನೆಗಳ ವತಿಯಿಂದ ಸಂಬಂಧಪಟ್ಟ ಕಚೇರಿಗಳ ಮುಂದೆ ಪ್ರತಿಭಟನೆ, ಧರಣಿ ಸತ್ಯಾಗ್ರಹ ಕೈಗೊಳ್ಳಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

ಜಿಲ್ಲಾ ಆದಿದ್ರಾವಿಡ ತುಳು ಸಮಾಜ ಸೇವಾ ಸಂಘದ ನಾರಾಯಣ್, ಸೋಮಶೇಖರ್, ಲೋಹಿತ್ ಕುಮಾರ್ ಉಪಸ್ಥಿತರಿದ್ದರು.

# ಚೀನಾಗೆ ಭಾರತ ವ್ಯಾಪಾರ ನಿಯೋಗ ಭೇಟಿ

**ಬೀಜಿಂಗ್:** ಭಾರತ ಮತ್ತು ಚೀನಾ ನಡುವೆ ವಾಣಿಜ್ಯ ಸಂಬಂಧ ಅಭಿವೃದ್ಧಿಪಡಿಸುವ ಉದ್ದೇಶದಿಂದ 5 ವರ್ಷಗಳ ಬಳಿಕ ಭಾರತದ ವಾಣಿಜ್ಯ ಮಂಡಳಿಗಳ ನಿಯೋಗವು ಚೀನಾಕ್ಕೆ ಭೇಟಿ ನೀಡಿದೆ.

ಪಂಜಾಬ್, ಹರಿಯಾಣ, ದೆಹಲಿ, ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಗಳ (ಪಿಎಚ್‌ಡಿಸಿಸಿಐ) ನಿಯೋಗವು ಮಾರ್ಚ್ 29ರಿಂದ ಏಪ್ರಿಲ್ 4ರ ವರೆಗೆ ಚೀನಾದ ಶಾಂಘೈಮತ್ತು ಜಿಯಾಂಗ್ಸು ಪ್ರದೇಶಗಳಿಗೆ ಭೇಟಿ ನೀಡಲಿದೆ. ಶಾಂಘೈನ ಭಾರತೀಯ ಕಾನ್ಸುಲೇಟ್ ಜನರಲ್ ಪ್ರತೀಕ್ ಮಾಥುರ್ ಅವರು ಪಿಎಚ್‌ಡಿಸಿಸಿಐ ನಿಯೋಗ ಮತ್ತು ಪೂರ್ವ ಚೀನಾದ ಪ್ರಮುಖ ಕಂಪನಿಗಳು ಮತ್ತು ಹಣಕಾಸು ಸಂಸ್ಥೆಗಳ ನಡುವೆ ಭಾರತೀಯ ವ್ಯವಹಾರಗ ಳೊಂದಿಗೆ ಸಹಯೋಗದ ಅವಕಾಶಗ ಳನ್ನು ಅನ್ವೇಷಿಸಲು ಮಂಗಳವಾರ ಸಭೆಯನ್ನು ಆಯೋಜಿಸಿದ್ದರು.

ನಿಯೋಗವನ್ನು ಸ್ವಾಗತಿಸಿದ ಮಾಥುರ್, ಭಾರತವು ವಿಶ್ವದ ಅತ್ಯಂತ ವೇಗವಾಗಿ ಬೆಳೆಯು ತ್ತಿರುವ ಪ್ರಮುಖ ಆರ್ಥಿಕತೆಯಾಗಿ ಹೊರಹೊಮ್ಮುತ್ತಿದೆ ಎಂದು ಹೇಳಿದರು. ಕಳೆದ ವರ್ಷ ಉಭಯದೇಶಗಳು ದ್ವಿಪಕ್ಷೀಯ ಸಂಬಂಧಗಳನ್ನು ವೃದ್ಧಿಗೊಳಿಸಿದ ಬಳಿಕ ಚೀನಾಕ್ಕೆ ಭೇಟಿ ನೀಡಿರುವ ಭಾರತದ ಮೊದಲ ವ್ಯಾಪಾರ ನಿಯೋಗ ಇದಾಗಿದೆ.

# ಶಾಸಕರಿಂದ ನಗರ ಸಂಚಾರ: ಸಮಸ್ಯೆ ಆಲಿಕೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕ್ರೀಡಾಂಗಣ, ಹೊಯ್ಸಳ ನಗರ ಹಾಗು ಬೀರನಹಳ್ಳಿ ಕೆರೆ ಬಡಾವಣೆಗಳಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿ, ಜನಸಾಮಾನ್ಯರ ಸಮಸ್ಯೆ ಆಲಿಸಿದರು.

ಮೊದಲು ಜಿಲ್ಲಾ ಕ್ರೀಡಾಂಗಣಕ್ಕೆ ಭೇಟಿ ನೀಡಿ ಶಾಸಕರು ಪರಿಶೀಲನೆ ನಡೆಸಿದ ವೇಳೆ ಅಲ್ಲಿದ್ದ ಕ್ರೀಡಾಪಟುಗಳು ಸಮಸ್ಯೆ ಬಗ್ಗೆ ಶಾಸಕರ ಗಮನಕ್ಕೆ ತಂದರು. ಸಮಸ್ಯೆಗಳನ್ನು ಆಲಿಸಿದ ಶಾಸಕರು ಸ್ಥಳದಲ್ಲಿಯೇ ಇದ್ದ ಅಧಿಕಾರಿಗಳೊಂದಿಗೆ ಚರ್ಚಿಸಿ, ಸಮಸ್ಯೆಗಳನ್ನು ಶೀಘ್ರವೇ ಬಗೆಹರಿಸುವಂತೆ ಸೂಚನೆ ನೀಡಿದರು.

ಬಳಿಕ ನಗರದ ಹೊಯ್ಸಳ ನಗರ ಹಾಗು ಬೀರನಹಳ್ಳಿ ಕೆರೆ ಬಡಾವಣೆಯ ಸಮಸ್ಯೆಗಳ ಬಗ್ಗೆ ಅಲ್ಲಿನ ನಿವಾಸಿಗಳು ದೂರು ಸಲ್ಲಿಸಿದ್ದ ಹಿನ್ನಲೆಯಲ್ಲಿ ಬೆಳಿಗ್ಗೆಯೇ ಬಡಾವಣೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತ ಆರ್.ಕೃಷ್ಣಮೂರ್ತಿ ಹಾಗು



ಅಧಿಕಾರಿಗಳು ಜೊತೆಯಲ್ಲಿದ್ದರು.

# ಕಾಡಾನೆ ಸಿಟ್ಟಿಗೆ ಬೈಕ್‌ಗಳು ಜಖಂ: ಇಟಿಎಫ್ ಸಿಬ್ಬಂದಿ ಪಾರು

» ಮೊದಲನೇ ಪುಟದಿಂದ

ಸಮೀಪಕ್ಕೆ ಬಂದಿರುವುದನ್ನು ಗಮನಿಸಿದ ಸಿಬ್ಬಂದಿ ತಕ್ಷಣವೇ ವಾಹನಗಳನ್ನು ಅಲ್ಲೇ ಬಿಟ್ಟು ಜೀವ ಉಳಿಸಿಕೊಳ್ಳಲು ಓಡಿದ್ದಾರೆ.

ಸಿಬ್ಬಂದಿಯನ್ನು ಅಟ್ಟಿಸಿಕೊಂಡು ಹೋದ ಆನೆ ಬಳಿಕ ಅಲ್ಲೇ ಬಿದ್ದಿದ್ದ ಬೈಕ್‌ಗಳನ್ನು ವಾಹನಗಳನ್ನು ಕಾಲಿನಿಂದ ತುಳಿದು ಸಂಪೂರ್ಣವಾಗಿ ಜಖಂ ಮಾಡಿದೆ. ಪರಿಣಾಮ ವಾಹನಗಳು ಅಪ್ಪಚ್ಚಿಯಾಗಿದ್ದು, ಸ್ಥಳದಲ್ಲಿ ಆತಂಕ ಸೃಷ್ಟಿಯಾಗಿದೆ.

ಘಟನೆಯಿಂದ ಮತ್ತೂರು ಗ್ರಾಮದ ಜನರು ಆತಂಕಕ್ಕೊಳಗಾಗಿದ್ದಾರೆ. ಪ್ರತಿದಿನ ಜೀವ ಕೈಯಲ್ಲಿ ಹಿಡಿದು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮನೆಯಿಂದ ಹೊರಬರಲು ಭಯವಾಗುತ್ತಿದೆ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿದ್ದಾರೆ.

> **ಪರಿಹಾರಕ್ಕೆ ಆಗ್ರಹ**
> ಆನೆ ಹಾವಳಿ ತಡೆಗಟ್ಟಲು ಅರಣ್ಯ ಇಲಾಖೆ ಶಾಶ್ವತ ಕ್ರಮ ಕೈಗೊಳ್ಳಬೇಕು. ಸೋಲಾರ್ ಬೇಲಿ ಅಥವಾ ತಡೆಗೋಡೆ ನಿರ್ಮಾಣಕ್ಕೆ ಮುಂದಾಗಬೇಕು. ಪ್ರಾಣದ ಹಂಗು ತೊರೆದು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಸೂಕ್ತ ರಕ್ಷಣೆ ಹಾಗು ಸುಸಜ್ಜಿತ ವಾಹನಗಳ ವ್ಯವಸ್ಥೆ ಕಲ್ಪಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

# ಗಣೆಗಾರಿಕೆಗೆ ವಿನಾಕಾರಣ ಅಡ್ಡಿ: ಆರೋಪ

• ಪ್ರಜೋದಯ ವರದಿ

**ಹಾಸನ:** ಆಲೂರು ತಾಲ್ಲೂಕಿನ ಕಾರಗೋಡು ಹಾಗು ಜಯಂತಿ ನಗರದಲ್ಲಿ ಭೋವಿ ಸಮುದಾಯದವರು ಪಾರಂಪರಿಕವಾಗಿ ನಡೆಸಿಕೊಂಡು ಬಂದಿರುವ ಗಣೆಗಾರಿಕೆಗೆ ಕೆಲವರು ವಿನಾಕಾರಣ ಅಡ್ಡಿಪಡಿಸಿದ್ದು ಜಿಲ್ಲಾಡಳಿತ ಅದಕ್ಕೆ ಆಸ್ಪದ ನೀಡದೆ ಗಣೆಗಾರಿಕೆ ನಡೆಸಲು ಅವಕಾಶ ಮಾಡಿಕೊಡಬೇಕೆಂದು ಅಖಿಲ ಕರ್ನಾಟಕ ಭೋವಿ ಮಹಾಸಭಾ ರಾಜ್ಯಾಧ್ಯಕ್ಷ ಹೆಚ್.ಮಂಜಪ್ಪ ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಜಯಂತಿನಗರ, ಕಾರಗೋಡು ಮತ್ತು ವೈ.ಎಸ್.ಪುರ ಗ್ರಾಮಗಳಲ್ಲಿ 250 ರಿಂದ 300 ಭೋವಿ ಕುಟುಂಬಗಳು ಮಗ್ಗೆ ಗ್ರಾಮದ ಸರ್ವೆ ನಂ.151ರ 3 ಎಕರೆ ಪ್ರದೇಶವನ್ನು ಗುತ್ತಿಗೆ ಪಡೆದು ಕಲ್ಲು ಹೊಡೆದು ಜೀವನ ಸಾಗಿಸುತ್ತಿವೆ. ಇದೇ ಅವರಿಗೆ ಜೀವನಾಧಾರವಾಗಿದೆ. ಆದರೆ ಕೆಲವರು ಅಡ್ಡಿಪಡಿಸುತ್ತಿದ್ದಾರೆ. 2015 ರಿಂದ 20 ವರ್ಷಗಳ ವರೆಗೆ ಗುತ್ತಿಗೆ ಮಂಜೂರಾತಿ ಪಡೆದು ಗಣೆಗಾರಿಕೆ ನಡೆಸಲಾಗುತ್ತಿದೆ. ಸರ್ಕಾರದ ನಿಯಮ ಪಾಲನೆಯಾಗುತ್ತಿದ್ದರೂ ಯಾರದೋ ಮಾತು ಕೇಳಿ ಅಧಿಕಾರಿಗಳು ಅಡ್ಡಿಪಡಿಸು ತ್ತಿದ್ದಾರೆಂದರು.

ಭೋವಿ ಸಮುದಾಯದವರೇ ಸೈಜುಕಲ್ಲು ಒಡೆಯುವ ಕಾಯಕ



ಮಾಡಿಕೊಂಡಿದ್ದಾರೆ. ಅಲ್ಲಿ ಸಿಡಿಮದ್ದು ಬಳಿ ಬ್ಲಾಸ್ಟಿಂಗ್ ಮಾಡಲಾಗುತ್ತಿದೆ, ಸುತ್ತಲಿನ ಕೃಷಿ ಜಮೀನಿನ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಸುಳ್ಳು ಹೇಳಿ ವರ್ಷದ ಹಿಂದೆ ಗಣೆಗಾರಿಕೆ ಸ್ಥಗಿತಗೊಳಿಸಲಾಗಿತ್ತು. ಆ ಪ್ರದೇಶ ಶಿಲುಬೆ ಬೆಟ್ಟ ಎಂದು ಸುಳ್ಳು ಹೇಳಲಾಗುತ್ತಿದೆ. ಈಗ ಮತ್ತೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರೆಂಬ ಕಾರಣಕ್ಕೆ ತಾತ್ಕಾಲಿಕವಾಗಿ ಗಣೆಗಾರಿಕೆ ನಿಷೇಧಿಸಿ ಜಿಲ್ಲಾಧಿ ಕಾರಿ ಆದೇಶಿಸಿದ್ದಾರೆ. ಕಲ್ಲು ಒಡೆಯುವ ಕೆಲಸವನ್ನೇ ನಂಬಿರುವ ಬಡಕುಟುಂಬಗಳು ಹೇಗೆ ಜೀವನ ನಡೆಸಬೇಕೆಂದು ಪ್ರಶ್ನಿಸಿದರು.

ಗಣೆಗಾರಿಕೆ ಪುನಾರಂಭಕ್ಕೆ ಆದೇಶ ನೀಡದಿದ್ದರೆ ಏ.2 ರಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸುತ್ತೇವೆಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಟಿಯಲ್ಲಿ ಭೋವಿ ಮಹಾಸಭಾ ಜಿಲ್ಲಾಧ್ಯಕ್ಷ ಸಂದೀಪ್, ಕರ್ನಾಟಕ ರಕ್ಷಣಾ ವೇದಿಕೆ (ಶಿವ ರಾಮೇಗೌಡ ಬಣ) ಜಿಲ್ಲಾಧ್ಯಕ್ಷ ಪ್ರವೀಣ್‌ಗೌಡ, ಎಂ.ಮಹದೇವ್, ಚಿದಾನಂದ್, ಮದನ್ ಇದ್ದರು.

# ಬೈಕ್ ಡಿಕ್ಕಿ: ಪಾದಚಾರಿ ಸಾವು

• ಪ್ರಜೋದಯ ವರದಿ

**ಅರಸೀಕೆರೆ:** ಸವಾರನ ನಿರ್ಲಕ್ಷ್ಯ ಹಾಗು ವೇಗದ ಚಾಲನೆಯಿಂದ ರಸ್ತೆ ಬದಿ ಕಾಲ್ನಡಿಗೆಯಲ್ಲಿ ಹೊರಟಿದ್ದ ವ್ಯಕ್ತಿಗೆ ಡಿಕ್ಕಿಯಾಗಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಎ.ಕೋಡಿಹಳ್ಳಿ-ಗೋಣಿಸೋಮನಹಳ್ಳಿ ಮಾರ್ಗ ಮಧ್ಯೆ ನಡೆದಿದೆ.

ಜಾವಗಲ್ ಹೋಬಳಿ ವಡ್ರಹಳ್ಳಿಯ ಕಾಂತರಾಜು (65) ಮೃತರು. ಮಾ.29ರ ರಾತ್ರಿ 8.30ರ ಸಮಯದಲ್ಲಿ ಎ.ಕೋಡಿಹಳ್ಳಿಯಿಂದ ಗೋಣಿಸೋಮನಹಳ್ಳಿಗೆ ಹೋಗುತ್ತಿದ್ದಾಗ ಹಳೇಬೀಡು ಕಡೆಯಿಂದ ವೇಗವಾಗಿ ಬಂದ ಬೈಕ್ ಸವಾರ ಡಿಕ್ಕಿ ಮಾಡಿದ್ದಾನೆ. ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹಳೆಯ ದ್ವೇಷ: ಇಬ್ಬರ ಮೇಲೆ ಮಾರಣಾಂತಿಕ ಹಲ್ಲೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಜಗಳ ಬಿಡಿಸಿದರು ಎಂಬ ದ್ವೇಷದಿಂದ ಮೂವರು ಒಟ್ಟಾಗಿ ಇಬ್ಬರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ನಿಡುವಣಿ ಗ್ರಾಮದಲ್ಲಿ ನಡೆದಿದೆ.

ಗಾಯಗೊಂಡಿದ್ದ ಗ್ರಾಮದ ಜಗದೀಶ್ ಹಾಗು ಪಾಲಾಕ್ಷ ಅವರನ್ನು ಆಸ್ಪತ್ರೆಗೆ ದಾಖಲಿಸ ಲಾಗಿದೆ. ಅದೇ ಗ್ರಾಮದ ಮದನ್, ಲೋಕೇಶ್, ಉದಯ್ ಆರೋಪಿಗಳು. ಮಾ.29ರ ಸಂಜೆ 7.30ರ ಸಮಯದಲ್ಲಿ ಮೂವರು ಸೇರಿ ಗಣೇಶ್ ಎಂಬಾತನ ಜೊತೆಗೆ ಕ್ಷುಲ್ಲಕ ಕಾರಣಕ್ಕೆ ಜಗಳ ಮಾಡುತ್ತಿದ್ದರು. ವಿಷಯ ತಿಳಿದು ಅಲ್ಲಿಗೆ ತೆರಳಿದ್ದ ಜಗದೀಶ್ ಎರಡೂ ಕಡೆಯವರನ್ನು ಸಮಾಧಾನಪಡಿಸಿ ವಾಗ್ವಾದ ತಪ್ಪಿಸಿದ್ದರು.

ಆದರೆ, ರಾತ್ರಿ 11ರ ಸಮಯದಲ್ಲಿ ಬೈಕ್‌ನಲ್ಲಿ ಹೋಗುತ್ತಿದ್ದಾಗ ಜಗದೀಶ್‌ನನ್ನು ತಡೆದ ಮದನ್, ಲೋಕೇಶ್, ಚೇತನ್ ಮತ್ತು ಉದಯ್ ಅವರು ಏಕಾಏಕಿ 4-5 ಬಿಯರ್ ಬಾಟಲಿ ಎಸೆದು ಗಲಾಟೆ ಶುರು ಮಾಡಿದ್ದಾರೆ. ಮದನ್ ಎಂಬಾತ ಮಚ್ಚಿನಿಂದ ತಲೆಗೆ ಬೀಸಿದ್ದಾನೆ. ನಮ್ಮ ಗಲಾಟೆ ಬಿಡಿಸಲು ನೀವು ಯಾರು ಎಂದು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಚೇತನ್ ಕಬ್ಬಿಣದ ರಾಡ್‌ನಿಂದ ಹೊಡೆದಿದ್ದಾನೆ. ಜಗದೀಶ್ ಜೊತೆಗೆ ನಿಂತಿದ್ದ ಪಾಲಾಕ್ಷ ಅವರಿಗೆ ಕಲ್ಲಿನಿಂದ ಹೊಡೆದಿದ್ದಾರೆ. ಬಿಯರ್ ಬಾಟಲಿ ಚೂರಿನಿಂದ ಇರಿದಿದ್ದಾರೆ ಎನ್ನಲಾಗಿದೆ. ಹಳ್ಳಿಮೈಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅರಸೀಕೆರೆ ತಾತ್ಕಾಲಿಕ ಬಸ್ ನಿಲ್ದಾಣದಿಂದ ಅನಾನುಕೂಲ ಅಧಿಕ



• ಪ್ರಜೋದಯ ವರದಿ

**ಅರಸೀಕೆರೆ:** ನಗರದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಲಾಗಿರುವ ಬಸ್ ನಿಲ್ದಾಣವು ಸಾರ್ವಜನಿ ಕರಿಗೆ ಅನುಕೂಲಕ್ಕಿಂತ ಅನಾನುಕೂಲವನ್ನೇ ಹೆಚ್ಚಾಗಿ ಕರುಣಿಸುತ್ತಿದೆ ಎಂದು ಸ್ಥಳೀಯ ಯೋಜನಾ ಪ್ರಾಧಿಕಾರದ ಮಾಜಿ ಸದಸ್ಯ ಶಿವನ್ ರಾಜ್ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ಕನಿಷ್ಠ ಮಟ್ಟದ ಸೌಲಭ್ಯ ಕಲ್ಪಿಸಿಲ್ಲ. ಬಸ್ ನಿಲ್ದಾಣ ಸ್ಥಳಾಂತರಿಸುವಾಗ ಪರ್ಯಾಯ ವ್ಯವಸ್ಥೆ ಕೈಗೊಳ್ಳಬೇಕಿತ್ತು. ಆದರೆ ಇಲ್ಲಿ ಕುಡಿಯುವ ನೀರು ಇಲ್ಲ, ಶೌಚಾಲಯ ವ್ಯವಸ್ಥೆ ಸಮರ್ಪಕವಾಗಿಲ್ಲ. ಪ್ರಯಾಣಿಕರಿಗೆ ನೆರಳು ಇಲ್ಲ, ಕುಳಿತುಕೊಳ್ಳಲು ವ್ಯವಸ್ಥೆ ಇಲ್ಲ. ಮಹಿಳೆಯರು, ವೃದ್ಧರು, ಮಕ್ಕಳು ಹಾಗು ದೂರದ ಪ್ರಯಾಣಿಕರು ಭಾರೀ ತೊಂದರೆ ಅನುಭವಿಸುತ್ತಿದ್ದಾರೆಂದರು.

ಅಧಿಕಾರಿಗಳು ಮೊದಲೇ ಯೋಚಿಸಿ ಎಪಿಎಂಸಿ ಬಳಿ ಇರುವ ಮುಖ್ಯ ಪ್ರವೇಶ ದ್ವಾರದಲ್ಲಿ ತಾತ್ಕಾಲಿಕ ಬಸ್ ನಿಲ್ದಾಣ ಮಾಡಿದ್ದರೆ ಉತ್ತಮವಾಗುತ್ತಿತ್ತು. ಅಲ್ಲಿ ನೆರಳು, ಪಾರ್ಕಿಂಗ್, ರಸ್ತೆ ಸಂಪರ್ಕವಿದೆ. ಆಟೋ ಚಾಲಕರಿಗೂ ಅನುಕೂಲಗಳಾಗುತ್ತಿದ್ದವು ಎಂದು ಹೇಳಿದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಒಳ್ಳೆಯ ಕೆಲಸ ಮಾಡಿದರೆ ನಾವು ಬೆಂಬಲಿಸುತ್ತೇವೆ. ಜೆಡಿಎಸ್ ಎಂದಿಗೂ ಅಭಿವೃದ್ಧಿ ವಿರೋಧಿಯಲ್ಲ. ಆದರೆ ಮೂಲಸೌಕರ್ಯ ಕಲ್ಪಿಸಿ ಎಂದು ಕೇಳುವುದು ತಪ್ಪಾ ಎಂದು ಪ್ರಶ್ನಿಸಿದರು.

ಯುವ ಮುಖಂಡ ಉಪೇಂದ್ರ ಅವರು ಮಾತನಾಡಿ, ನಗರದ ಹೃದಯ ಭಾಗದಲ್ಲಿ ಸಾವಿರಾರು ಜನರು ದಿನನಿತ್ಯ ಓಡಾಡುವಂತಹ ಮಹತ್ವದ ಬಸ್ ನಿಲ್ದಾಣವನ್ನು ತಾತ್ಕಾಲಿಕವಾಗಿ ಸ್ಥಳಾಂತರಿಸುವಾಗ ಕನಿಷ್ಟ ಸಾರ್ವಜನಿಕರ ಅನುಕೂಲತೆ, ಭದ್ರತೆ ಹಾಗು ಮೂಲಸೌಲಭ್ಯಗಳ ಬಗ್ಗೆ ಚಿಂತನೆ ಇರಬೇಕಾಗಿತ್ತು. ಶಾಸಕ ಕೆ.ಎಂ.ಶಿವಲಿಂಗೇಗೌಡರು ಕ್ಷೇತ್ರಕ್ಕೆ 35 ಕೋಟಿ ರೂ. ಅನುದಾನ ತಂದಿದ್ದೇವೆಂದು ಹೇಳುತ್ತಾರೆ. ಅಷ್ಟು ದೊಡ್ಡ ಮೊತ್ತದ ಯೋಜನೆ ಇದ್ದಾಗ, ಜನರು ಕಷ್ಟಪಡುವಂತಹ ತಾತ್ಕಾಲಿಕ ಬಸ್ ನಿಲ್ದಾಣ ಏಕೆ ನಿರ್ಮಿಸಲಾಗಿದೆ. ಮನೆ ಕಟ್ಟುವಾಗಲೂ ಯೋಜನೆ ಮಾಡಿ ಕಟ್ಟುತ್ತಾರೆ. ಆದರೆ ಸಾವಿರಾರು ಜನರು ಬಳಕೆ ಮಾಡುವ ಬಸ್ ನಿಲ್ದಾಣದ ವಿಷಯದಲ್ಲಿ ಏಕೆ ಇಷ್ಟು ನಿರ್ಲಕ್ಷ್ಯ ಎಂದು ಪ್ರಶ್ನಿಸಿದರು.

ಮುಖಂಡರಾದ ಬಕಪ್ಪ ಶಿವಣ್ಣ, ಪ್ರವೀಣ್, ಮಧುಸೂದನ್, ನಗರಸಭಾ ಮಾಜಿ ಸದಸ್ಯ ಪುಟ್ಟಣ್ಣ ಇತರರಿದ್ದರು.

# ಇನ್ನುಂದೆ ಮುಂಬಡ್ತಿಗೆ ತರಬೇತಿ ಕಡ್ಡಾಯ



• ಪ್ರಜೋದಯ ವರದಿ

**ಬೆಂಗಳೂರು:** ಇನ್ನು ಮುಂದೆ ಸರ್ಕಾರಿ ನೌಕರರು ಹುದ್ದೆಯಲ್ಲಿ ಮುಂಬಡ್ತಿ ಪಡೆಯಲು ಸೇವಾನುಭವ ಅಥವಾ ಸೇವಾ ಜೇಷ್ಠತೆ ಒಂದೇ ಮಾನದಂಡವಲ್ಲ, ಅಗತ್ಯವಾದ ತರಬೇತಿ ಪಡೆಯುವುದೂ ಕಡ್ಡಾಯ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಈ ಕಾರಣಕ್ಕೆ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಮುಂಬಡ್ತಿಗಾಗಿ ತರಬೇತಿ ಕಡ್ಡಾಯ) ನಿಯಮಗಳು 2026 ಅನ್ನು ಪ್ರಕಟಿಸಲಾಗಿದೆ. ಪದೋನ್ನತಿ ಪಡೆಯಲು ಕಡ್ಡಾಯವಾಗಿ ತರಬೇತಿ ನೀಡಬೇಕೆಂದು ಕರ್ನಾಟಕ ಆಡಳಿತ ಸುಧಾರಣಾ ಆಯೋಗ 2 ಕೂಡಾ ತನ್ನ ಒಂದನೇ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಅದರ ಅನ್ವಯ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಿರ್ಣಯ ತೆಗೆದುಕೊಂಡು ಕರಡು ನಿಯಮ ರೂಪಿಸಲಾಗಿತ್ತು. ಇದೀಗ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

# ನಾಳೆಯಿಂದ ಆಂಜನೇಯ ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಪ್ರಥಮ 16 ಅಡಿ ಏಕಶಿಲಾ ಶ್ರೀ ಆಂಜನೇಯಸ್ವಾಮಿ ನೂತನ ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವ ಏ.2 ರಿಂದ 4ರ ವರೆಗೆ ಸಕಲೇಶಪುರ ತಾಲ್ಲೂಕು ಯಸಳೂರು ಹೋಬಳಿ ಕರಗೂರು ಕೂಡಿಗೆ (ಪಾಲಹಳ್ಳಿ) ಗ್ರಾಮದಲ್ಲಿ ನಡೆಯಲಿದೆ ಎಂದು ಶ್ರೀ ವಾಯುಪುತ್ರ ಸೇವಾ ಸಮಿತಿ ಅಧ್ಯಕ್ಷ ಬಿ.ಎಸ್.ತೇಜಸ್ವಿ ಅವರು ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 3 ದಿನಗಳ ಕಾಲ ವೇದಿಕೆ ಹಾಗು ಆಧ್ಯಾತ್ಮಿಕ ಕಾರ್ಯಕ್ರಮ ನೆರವೇರಲಿವೆ. ಏ.2 ರಂದು ಬೆಳಿಗ್ಗೆ ಗಣೇಶ ಪ್ರಾರ್ಥನೆ, ಚಪ್ಪರ ಪೂಜೆ, ಮಹಾಸಂಕಲ್ಪ, ಕಂಕಣಧಾರಣೆ, ಪಂಚಗವ್ಯ ಮೇಳ ಸೇರಿ ಹಲವು ಪೂಜಾ ಕಾರ್ಯ ಕ್ರಮ ನಡೆಯಲಿವೆ. ಪ್ರತಿದಿನ ಸಂಜೆ ದಾನಿಗಳ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾತ್ರಿ ಕಾಮಿಡಿ ಕಿಲಾಡಿ ಖ್ಯಾತಿಯ ಶಿವರಾಜ್ ಕೆ.ಆರ್ .ಪೇಟೆ ಮತ್ತು ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಏ.3ರಂದು ಬೆಳಿಗ್ಗೆ 108



ಸುಮಂಗಲಿಯರೊಂದಿಗೆ ಗಂಗಾ ಕಳಶ ಪ್ರವೇಶ ಕಾರ್ಯಕ್ರಮ ಜರುಗಲಿದ್ದು, ಕಳಸ ಪೂಜೆ, ವೇದ ಪಾರಾಯಣ, ಗಂಗಾಪೂಜೆ, ಗೋಪೂಜೆ ನಡೆಯಲಿದೆ. ಬಂಟ್ವಾಳ ತಾಲ್ಲೂಕಿನ ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ಭಕ್ತರನ್ನು ಆಧ್ಯಾತ್ಮಿಕ ತೊಳಲಿನಲ್ಲಿ ಮುಳುಗಿಸಲಿದೆ ಎಂದರು.

ಏ.4ರಂದುಮುಂಜಾನೆ ಧಾರ್ಮಿಕ ಕಾರ್ಯಕ್ರಮ ನಂತರ ಬೆಳಿಗ್ಗೆ 10.30ಕ್ಕೆ ನಡೆಯುವ ಸಭಾ ಕಾರ್ಯ ಕ್ರಮದಲ್ಲಿ ವಿವಿಧ ಮಠಾಧೀಶರು ಹಾಗು ಗಣ್ಯರು ಭಾಗವಹಿಸಿ ಆಶೀ ರ್ವಚನ ನೀಡಲಿದ್ದಾರೆ. ಕಾರ್ಯ ಕ್ರಮಕ್ಕೆ ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಶ್ರೀ ನಿರ್ಮಲಾ ನಂದನಾಥ ಸ್ವಾಮೀಜಿ, ಶ್ರೀ ಶಂಭುನಾಥ ಸ್ವಾಮೀಜಿ ಸೇರಿ ವಿವಿಧ ಧಾರ್ಮಿಕ ಗುರುಗಳು ಆಗಮಿಸಲಿ ದ್ದಾರೆ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಮಾಜಿ ಸಚಿವ ಸಿ.ಟಿ.ರವಿ, ಸಂಸದ ಶ್ರೇಯಸ್ ಪಟೇಲ್ ಹಾಗು ಜಿಲ್ಲೆಯ ಎಲ್ಲಾ ಶಾಸಕರು ಭಾಗಿಯಾಗಲಿದ್ದಾರೆಂದು ತಿಳಿಸಿದರು.

ಈ ಭವ್ಯ ಮಹೋತ್ಸವ ಯಶಸ್ವಿಗೊಳಿಸಲು ಗ್ರಾಮಸ್ಥರು ಸಮಗ್ರವಾಗಿ ಕೈಜೋಡಿ ಸಿದ್ದು, ಭಕ್ತಾಧಿಗಳು ಹೆಚ್ಚಿನ ಸಂಖ್ಯೆ ಯಲ್ಲಿ ಆಗಮಿಸಿ ಸ್ವಾಮಿಯವರ ಕೃಪೆಗೆ ಪಾತ್ರರಾಗಬೇಕೆಂದು ಮನವಿ ಮಾಡಿದರು.

ಸಮಿತಿ ಗೌರವಾಧ್ಯಕ್ಷ ಕೆ.ಕೆ. ರಾಮಚಂದ್ರ, ನಿರ್ದೇಶಕ ಹೆಚ್.ಡಿ. ಜೈಕುಮಾರ್, ಕೆ.ಎಸ್. ರವಿಕುಮಾರ್ ಇದ್ದರು.

# ಛಾಯಾಗ್ರಾಹಕರಿಂದ ನಮ್ಮ ಮೇಲೆ ದಬ್ಬಾಳಿಕೆ: ಮೇಘಾ

• ಪ್ರಜೋದಯ ವರದಿ

**ಸಕಲೇಶಪುರ:** ವಿವಾಹ ಪೂರ್ವ ಜೋಡಿಗಳನ್ನು ಪ್ರಿ ವೆಡ್ಡಿಂಗ್ ಶೂಟ್‌ಗಾಗಿ ಕರೆದುಕೊಂಡು ಬಂದಿದ್ದ ಛಾಯಾಗ್ರಾಹಕರು ಗರ್ಭಗುಡಿ ಹಿಂಭಾಗದ ಗೋಡೆಗೆ ಕಾಲು ತಾಗುವಂತೆ ನಿಲ್ಲಿಸಿ ಫೋಟೋ ತೆಗೆಸಿಕೊಳ್ಳುತ್ತಿದ್ದರು. ಅದನ್ನು ಪ್ರಶ್ನಿಸಿದ್ದಕ್ಕೆ ನಮ್ಮ ಮೇಲೆ ದಬ್ಬಾಳಿಕೆ ಮಾಡಿದರೆಂದು ಛಾಯಾಗ್ರಾಯಹಕರ ಮೇಲೆ ಹಲ್ಲೆ ನಡೆಸಿದ ಪ್ರಶಾಂತ್ ಅವರ ಪತ್ನಿ ಮೇಘಾ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶುಕ್ರವಾರ ಬೆಳಿಗ್ಗೆ 8.30ಕ್ಕೆ ನಾವು ಕುಟುಂಬ ಸಮೇತ ಪೂಜೆಗೆ ಬಂದಿದ್ದೆವು. ದೇವಸ್ಥಾನದ ವರಾಂಡದಲ್ಲಿ ಹೀಗೆಲ್ಲ ನಿಂತು ಫೋಟೊ ತೆಗೆಯುವುದು ಬೇಡವೆಂದು ಅರ್ಚಕರು ಹೇಳಿದ್ದರೂ ಸಹ ಕಿವಿಗೊಡದೆ ಛಾಯಾಗ್ರಾಹಕರು ದುರ್ವರ್ತನೆ ಪ್ರದರ್ಶಿಸಿದರು. ನನ್ನ ಪತಿ ಪ್ರಶಾಂತ್ ಸಹ ಅದೇ ವಿಚಾರ ಪ್ರಸ್ತಾಪಿಸಿದ್ದಕ್ಕೆ ಗಲಾಟೆ ಶುರು ಮಾಡಿದರೆಂದರು.



ನಾವು ಸಹ ಇದೇ ದೇವಸ್ಥಾನದಲ್ಲಿ ಫೋಟೋ ತೆಗೆಸಿಕೊಂಡಿದ್ದೇಂದು ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿರುವ ಫೋಟೋಗಳೆಲ್ಲ ನಕಲಿ. ನಮ್ಮ ವಿರುದ್ಧ ತಪ್ಪು ಮಾಹಿತಿ ಹರಡಲಾಗುತ್ತಿದೆ ಎಂದರು.

ಸ್ಥಳೀಯರಾದ ಪೃಥ್ವಿ ಅವರೆಕಾಡು, ದೇವಾಲದಕೆರೆ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಪೂರ್ಣೇಶ್, ಕನಚೂರುವಿನೋದ್, ಪಟ್ಟದೂರು ಪುಟ್ಟಣ್ಣ, ಬ್ರಿಜೇಶ್, ಸಂತೋಷ್ ಮೇಕನಗದ್ದೆ, ದೀಪಕ್ ದೊಡ್ಡಯ್ಯ, ಕರವೇ ಮುಖಂಡ ಸಂಗ್ರಾಮ್, ಸುರೇಶ್, ಡಿ.ಎಸ್. ಲೋಕೇಶ್ ಇನ್ನಿತರರು ಇದ್ದರು.

## ಎನ್‌ಡಿಎ ಚುನಾವಣಾ ಪ್ರಣಾಳಿಕೆ ಭರವಸೆ

# ವರ್ಷಕ್ಕೆರಡು ಉಚಿತ ಸಿಲಿಂಡರ್

• ಪ್ರಜೋದಯ ವರದಿ

**ತಿರುವನಂತಪುರ:** ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಕೇರಳ ವಿಧಾನಸಭೆ ಚುನಾವಣೆಗೆ ಮಂಗಳವಾರ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ನಿರ್ಗತಿಕ ಮಹಿಳೆಯರು ಮತ್ತು 70 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಆರ್ಥಿಕ ಸಹಾಯ, ಬಡ ಕುಟುಂಬ ಗಳಿಗೆ ವರ್ಷಕ್ಕೆ ಎರಡು ಉಚಿತ ಎಲ್‌ಪಿಜಿ ಸಿಲಿಂಡರ್‌ಗಳು, ಕೇರಳಕ್ಕೆ ಏಮ್ಸ್ ಮತ್ತು ರಾಜ್ಯದ ಪೂಜಾ ಸ್ಥಳಗಳ ರಕ್ಷಣೆ ಭರವಸೆ ನೀಡಲಾಗಿದೆ.

ಇಲ್ಲಿ ನಡೆದ ಎನ್‌ಡಿಎ ಕಾರ್ಯಕ್ರಮದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಪ್ರಣಾಳಿಕೆ ಬಿಡುಗಡೆ ಮಾಡಿದರು. ರಾಜ್ಯ ರಾಜಧಾನಿಯನ್ನು ಕಣ್ಣೂರಿನೊಂದಿಗೆ ಸಂಪರ್ಕಿಸುವ ಹೈಸ್ಪೀಡ್ ರೈಲು ಜಾಲ, ಪ್ರತಿ ಮನೆಗೆ 20,000 ಲೀಟರ್ ಉಚಿತ ನೀರು ಮತ್ತು ಮುಲ್ಲಪೆರಿಯಾರ್ ಅಣೆಕಟ್ಟಿಗೆ ಸಂಬಂಧಿಸಿದಂತೆ ತಮಿಳುನಾಡಿಗೆ ನೀರು ಮತ್ತು ಕೇರಳಕ್ಕೆ ಸುರಕ್ಷತೆ ಎಂಬ ಭರವಸೆಯೂ ಸೇರಿದೆ.



ಬಡ ಮತ್ತು ಬಿಪಿಎಲ್ ಕುಟುಂಬಗಳ ಪ್ರತಿಯೊಬ್ಬ ಮಹಿಳೆಗೆ ಮಾಸಿಕ 2,500 ರೀಚಾರ್ಜ್ ನೊಂದಿಗೆ ಭಕ್ಷ್ಯ ಆರೋಗ್ಯ ಸುರಕ್ಷಾ ಕಾರ್ಡ್ ನೀಡಲಾಗುವುದೆಂದು ಪ್ರಣಾಳಿಕೆ ಯಲ್ಲಿ ಭರವಸೆ ನೀಡಲಾಗಿದೆ. ಅದನ್ನು ಮಹಿಳೆಯರು ಔಷ ಧಾಲಯಗಳು ಮತ್ತು ದಿನಸಿ ಅಂಗಡಿಗಳಲ್ಲಿ ಬಳಸಬಹುದು. ಇದರ ಜೊತೆಗೆ, ಬಡ ಕುಟುಂಬಗಳ ಮಹಿಳಾ ಮುಖ್ಯಸ್ಥೆ, ವಿಧವೆಯರು ಮತ್ತು 70 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ತಿಂಗಳಿಗೆ 3,000 ರೂ. ಪಿಂಚಣಿ ನೀಡಲಾಗು ವುದು. ಹೆಚ್ಚುವರಿಯಾಗಿ, ಓಣಂ ಮತ್ತು ಕ್ರಿಸ್‌ಮಸ್ ಸಮಯದಲ್ಲಿ ಬಡ ಕುಟುಂಬಗಳಿಗೆ ತಲಾ ಒಂದು ಉಚಿತ ಎಲ್‌ಪಿಜಿ ಸಿಲಿಂಡರ್ ನೀಡಲಾಗುವುದೆಂದು ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ದೇವಸ್ಥಾನ ನಿರ್ವಹಣೆಯಲ್ಲಿ ಭಕ್ತರ ಭಾಗವಹಿ ಸುವಿಕೆಯನ್ನು ಹೆಚ್ಚಿಸಲು ದೇವಸ್ವಂ ಮಂಡಳಿಗಳನ್ನು ನವೀಕರಿ ಸುವ ಮೂಲಕ ಶಬರಿಮಲೆ, ಗುರುವಾಯೂರು ಮತ್ತು ಇತರ ಎಲ್ಲಾ ಪೂಜಾ ಸ್ಥಳಗಳನ್ನು ರಕ್ಷಿಸುತ್ತೇವೆಂದು ಭರವಸೆ ನೀಡಲಾಗಿದೆ.

ಶಬರಿಮಲೆ ದೇವಸ್ಥಾನದ ಚಿನ್ನ ಕಳ್ಳತನದ ಬಗ್ಗೆ ಕಾಲಮಿತಿಯ ಸಿಬಿಐ ತನಿಖೆ ನಡೆಸಿ ಭ್ರಷ್ಟಾಚಾರವನ್ನು ಕೊನೆಗೊಳಿಸುವುದಾಗಿ ಎನ್‌ಡಿಎ ಪ್ರಣಾಳಿಕೆಯಲ್ಲಿ ತಿಳಿಸಿದೆ. ಬೆಟ್ಟದ ತುದಿಯಲ್ಲಿರುವ ದೇವಾಲಯದಲ್ಲಿ ದೊಡ್ಡ ಪ್ರಮಾಣದ ಭಕ್ತರ ಕೇಂದ್ರಿತ ಮೂಲಸೌಕರ್ಯ ಅಭಿವೃದ್ಧಿಯನ್ನು ಕೈ ಗೊಳ್ಳಲು ಶಬರಿಮಲೆ ಮೂಲಸೌಕರ್ಯ ಅಭಿವೃದ್ಧಿ ಮಿಷನ್ ಅನ್ನು ಪ್ರಾರಂಭಿಸುವುದಾಗಿಯೂ ಅದು ಭರವಸೆ ನೀಡಿದೆ.

# ದೊಡ್ಡಕೊಂಡಗೊಳದಲ್ಲಿ ಮಹಿಳಾ ದಿನಾಚರಣೆ



• ಪ್ರಜೋದಯ ವರದಿ

**ಹಾಸನ:** ಮಹಿಳೆಯರು ಸ್ವ-ಉದ್ಯೋಗದ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವತ್ತ ಗಮನ ಹರಿಸಬೇಕೆಂದು ಜನನಿ ಫೌಂಡೇಶನ್ ಅಧ್ಯಕ್ಷೆ ಭಾನುಮತಿ ಅವರು ಹೇಳಿದರು.

ನಗರದ ಹೊರವಲಯದಲ್ಲಿರುವ ದೊಡ್ಡಕೊಂಡಗೊಳ ಸಮುದಾಯ ಭವನದಲ್ಲಿ ಜನನಿ ಫೌಂಡೇಶನ್ ವತಿಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ತಮ್ಮ ದೇಯಾ ಸಾಧನೆ ಮೂಲಕ ತಾನು ಯಾರಿಗೂ ಕಡಿಮೆ ಇಲ್ಲ ಎಂಬುದನ್ನು ಸಾಬೀತುಪಡಿಸಿದ್ದಾಳೆ. ಶಿಕ್ಷಣ, ಆರೋಗ್ಯ, ರಾಜಕೀಯ, ವಿಜ್ಞಾನ, ಸಾಹಿತ್ಯ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಗುರುತರ ಛಾಪು ಮೂಡಿಸುತ್ತಿದ್ದಾಳೆ. ಆದರೆ ಗ್ರಾಮೀಣ ಭಾಗದ ಮಹಿಳೆಯರಲ್ಲಿ ಹಿಂಜರಿಕೆ ಇನ್ನೂ ಇದೆ ಎಂದರು.

ದುಡಿಮೆ ಮತ್ತು ಶಿಕ್ಷಣ ಮಹಿಳೆಯರಿಗೆ ಜ್ಞಾನ, ಸ್ವಾತಂತ್ರ್ಯ, ಧೈರ್ಯವನ್ನು ನೀಡುತ್ತದೆ. ಆದ್ದರಿಂದ ಮಹಿಳೆಯರು ಶಿಕ್ಷಣ ಪಡೆದು ಸಬಲೀಕರಣದತ್ತ ಮುಖ ಮಾಡಬೇಕು. ಸಮಾಜದಲ್ಲಿ ಯಾರು ಮೇಲು, ಕೀಳಲ್ಲ. ಮಹಿಳೆಯರಿಗೂ ಸಮಾನ ಅವಕಾಶ ಗೌರವ ಸ್ಥಾನ ದೊರಕಬೇಕೆಂದರು.

ಜನನಿ ಫೌಂಡೇಶನ್‌ನ ಸಾವಿತ್ರಿ, ಚೈತ್ರ, ವಿನುತಾ, ಸಿಂಚನ, ವಿಜಯಲಕ್ಷ್ಮಿ, ಹೇಮಲತಾ, ಸುಂದರಮ್ಮ, ಬಬಿತಾ, ಹರಿಣಿ, ಯಶೋಧ, ರತ್ನ ಇತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019